# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## <u>ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು</u>

**(13ನೇ ವಾರ್ಷಿಕ ಘಟಿಕೋತ್ಸವ ಸಭೆ)**

**ದಿನಾಂಕ:29.01.2026**

# ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007**

**ದೂರವಾಣಿ ಸಂಖ್ಯೆ :08192–208029** **ಇ–ಮೇಲ್:registrar@davangereuniversity.ac.in**


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ :

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/1096/2025–26/** 4755 **ದಿನಾಂಕ:06.01.2026**

**ಇವರಿಗೆ,**

**ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:29.01.2026 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:29.01.2026 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಪ್ರಾಧಿಕಾರ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ/ಹಣಕಾಸು/ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:29.01.2026 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ (13ನೇ ವಾರ್ಷಿಕ ಘಟಿಕೋತ್ಸವ) ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು | : ಅಧ್ಯಕ್ಷರು |
| 2. | ಡಾ. ಕೇಶವ ಹೆಚ್., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ | : ಸದಸ್ಯರು |
| 3. | ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ, ದಾವಿವಿ | : ಸದಸ್ಯರು |
| 4. | ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು | : ಸದಸ್ಯರು |
| 5. | ಡಾ. ಬಿ. ಎನ್. ಉಮೇಶ್, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು | : ಸದಸ್ಯರು |
| 6. | ಶ್ರೀ ಭರಮಗೌಡ ಪಾಟೀಲ., ಪ್ರಾಚಾರ್ಯರು | : ಸದಸ್ಯರು |
| 7. | ಶ್ರೀ ತಿಪ್ಪೇಶ್ ಜಿ.ಆರ್., ಪ್ರಾಚಾರ್ಯರು | : ಸದಸ್ಯರು |
| 8. | ಡಾ. ಎ.ಜೆ. ನೀತಾ., ಪ್ರಾಚಾರ್ಯರು | : ಸದಸ್ಯರು |
| 9. | ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 10. | ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 11. | ಡಾ. ಜಿ.ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 12. | ಶ್ರೀ ಶಬೀರ್ ಅಲಿಖಾನ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 13. | ಶ್ರೀ ಪ್ರಶಾಂತ್ ಆರ್. ಟಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 14. | ಡಾ. ಪ್ರಶಾಂತ ಎನ್. ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು | : ಸದಸ್ಯರು |
| 15. | ಪ್ರೊ. ರವಿಕುಮಾರ್ ಪಾಟೀಲ್ ಹೆಚ್.ಎಸ್., ಪ್ರಾಧ್ಯಾಪಕರು, ದಾವಿವಿ | : ಸದಸ್ಯರು |
| 16. | ಪ್ರೊ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) | : ಸದಸ್ಯರು |
| 17. | ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್.(ಸೂಪರ್ ಟೈಂ ಸ್ಕೇಲ್) ಕುಲಸಚಿವರು (ಆಡಳಿತ) | : ಸದಸ್ಯ ಕಾರ್ಯದರ್ಶಿ |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 17 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ಸಿಂ.01(a)/(01/26) |

## –:ಟಿಪ್ಪಣಿ:–

**ವಿಷಯಃ ದಿನಾಂಕ:30.12.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ ಕುರಿತು.**

*****

ದಿನಾಂಕ:30.12.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:09.01.2026 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಇದುವರೆಗೂ ಸದರಿ ನಡಾವಳಿಗಳ ಕುರಿತು ಯಾವುದೇ ಆಕ್ಷೇಪಣೆಗಳು ಸ್ವೀಕೃತಗೊಂಡಿರುವುದಿಲ್ಲ. ಆದ್ದರಿಂದ, ಸದರಿ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:29.01.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕಃ30.12.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

**ನಡಾವಳಿಗಳ ಪುಟಸಂಖ್ಯೆ:04** ರ ವಿಷಯ ಸಂಖ್ಯೆ:02/(a) (12/25) ರ ನಿರ್ಣಯ ಕೋಷ್ಟಕದಲ್ಲಿ ಕ್ರಮ ಸಂಖ್ಯೆ 03 ರಲ್ಲಿ – ಡಾ. ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ (ದಿನಾಂಕ:18.01.2026 ರಿಂದ 17.01.2028 ವರೆಗೆ) ನೇಮಕ ಮಾಡಿರುವುದಕ್ಕೆ ಸಭೆಯು ಆಕ್ಷೇಪಣೆಯನ್ನು ವ್ಯಕ್ತಪಡಿಸಿತು ಹಾಗೂ ಈ ಕುರಿತು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಮುಂದಿನ ಕ್ರಮವಹಿಸಲು ನಿರ್ಣಯಿಸಿತು.

**ನಡಾವಳಿಗಳ ಪುಟಸಂಖ್ಯೆ:07** ರ ವಿಷಯ ಸಂಖ್ಯೆ:02/(d) (12/25) ರ ಟಿಪ್ಪಣಿಯಲ್ಲಿ ದಿ. ಪ್ರೊ. ಅನಿತಾ ಹೆಚ್.ಎಸ್., ಪ್ರಾಧ್ಯಾಪಕರು ಇವರ ಪತಿಯಾದ ಶ್ರೀ ಹೆಚ್.ಬಿ. ದೇವರಾಜ, ಸಹಾಯಕ ಕುಲಸಚಿವರು ಇವರಿಗೆ ಬಾಕಿ ವ್ಯತ್ಯಾಸದ ಮೊತ್ತ ಹಾಗೂ ತುಟ್ಟಿ ಭತ್ಯೆಯ ವ್ಯತ್ಯಾಸದ ಮೊತ್ತವನ್ನು ಪಾವತಿಸುವ ದಿನಾಂಕವನ್ನು:01.08.2025 ರ ಬದಲಾಗಿ ದಿನಾಂಕ:01.07.2025 ರಿಂದ ಎಂದು ತಿದ್ದುಪಡಿ ಮಾಡಿಕೊಂಡು ಓದಲು ಸಭೆಯು ನಿರ್ಣಯಿಸಿತು.

**ನಡಾವಳಿಗಳ ಪುಟಸಂಖ್ಯೆ:47** ರ ವಿಷಯ ಸಂಖ್ಯೆ:09/(d) (12/25) ರ ಟಿಪ್ಪಣಿಯಲ್ಲಿ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅವಶ್ಯವಿರುವ ಪೀಠೋಪಕರಣಗಳ ಪಟ್ಟಿಯಲ್ಲಿ Podium–50 ರ ಬದಲಾಗಿ Podium–10 ಎಂದು ತಿದ್ದುಪಡಿ ಮಾಡಿಕೊಂಡು ಓದಲು ಸಭೆಯು ನಿರ್ಣಯಿಸಿತು.

ಉಳಿದಂತೆ, ಇತರೆ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ಸಿಂ.01(b)/(01/26) |

## –ಃಟಿಪ್ಪಣಿಃ–

**ವಿಷಯಃ ಪಿ.ಹೆಚ್.ಡಿ. ಪದವಿಗೆ ಸಂಬಂಧಿಸಿದ ಮಾನದಂಡಗಳು ಹಾಗೂ ಕಾರ್ಯವಿಧಾನಗಳ ನಿರ್ವಹಣೆಗೆ ಸಂಬಂಧಿಸಿದ ವಿನಿಯಮಗಳಿಗೆ ಅನುಮೋದನೆ ನೀಡುವ ಕುರಿತು.**

*****

ವಿಶ್ವವಿದ್ಯಾನಿಲಯದ ಪಿ.ಹೆಚ್.ಡಿ. ಪದವಿಗೆ ಸಂಬಂಧಿಸಿದ ಮಾನದಂಡಗಳು ಹಾಗೂ ಕಾರ್ಯವಿಧಾನಗಳ ನಿರ್ವಹಣೆಗೆ ಸಂಬಂಧಿಸಿದ – Regulations Governing the Degree of Doctor of Philosophy - 2024 – ವಿನಿಯಮಗಳನ್ನು ರಚಿಸಿಕೊಂಡು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾದ ಸಿಂಡಿಕೇಟ್ ಸಭೆ(18.03.2025), ಹಣಕಾಸು ಸಮಿತಿ ಸಭೆ (25.03.2025) ಹಾಗೂ ವಿದ್ಯಾವಿಷಯಕ ಪರಿಷತ್ ಸಭೆ(01.04.2025) ಸಭೆಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.

ಸರ್ಕಾರವು ಸದರಿ ವಿನಿಯಮಗಳಿಗೆ ಸಂಬಂಧಿಸಿದಂತೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ ಪುನಃ ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದು ಪ್ರಸ್ತುತ ಕುಲಪತಿಗಳು ಹಾಗೂ ಕುಲಸಚಿವರ ಸಹಿಯೊಂದಿಗೆ ಪುನಃ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಆದ್ದರಿಂದ, ಸದರಿ ವಿನಿಯಮಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದ್ದು, ಪ್ರಾಧಿಕಾರಗಳ ಅನುಮೋದನೆ ಪಡೆದು ಪುನಃ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ.

ಆದ್ದರಿಂದ, ಸದರಿ ವಿನಿಯಮಗಳನ್ನು ದಿನಾಂಕ:29.01.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಪಿ.ಹೆಚ್.ಡಿ. ಪದವಿಗೆ ಸಂಬಂಧಿಸಿದಂತೆ – Regulations Governing the Degree of Doctor of Philosophy - 2024 – ವಿನಿಯಮಗಳನ್ನು ಸರ್ಕಾರದ ಮೂಲಕ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 3 | |
|---|---|
| ವಿಷಯ ಸಂಖ್ಯೆ: | ಸಿಂ.02(a)/(01/26) |

## –:ಟಿಪ್ಪಣಿ:–

ವಿಷಯ: **2024–25ನೇ ಶೈಕ್ಷಣಿಕ ಸಾಲಿನಲ್ಲಿ ತೇರ್ಗಡೆ ಹೊಂದಿದ ವಿವಿಧ ಸ್ನಾತಕ/ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳ ಮತ್ತು ಪಿಹೆಚ್.ಡಿ., ಪದವಿ ಪ್ರದಾನ ಮಾಡುವ ಅಭ್ಯರ್ಥಿಗಳ ಅನುಮೋದನೆ ಬಗ್ಗೆ.**

ಉಲ್ಲೇಖ: 1. ವಿ.ವಿ. ಪತ್ರ ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/1096/2025–26/4488, ದಿನಾಂಕ:19.01.2026

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.01.2026

*****

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:30.01.2026 ರಂದು 13ನೇ ವಾರ್ಷಿಕ ಘಟಿಕೋತ್ಸವವನ್ನು ಏರ್ಪಡಿಸಲಾಗಿದೆ. ಈ ಸಂಬಂಧವಾಗಿ, 2024–25ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ತೇರ್ಗಡೆ ಹೊಂದಿರುವ ವಿವಿಧ ಸ್ನಾತಕ/ ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಡಾಕ್ಟರ್ ಆಫ್ ಫಿಲಾಸಫಿ (ಪಿಹೆಚ್.ಡಿ.,) ಪದವಿ ಪ್ರದಾನ ಮಾಡಲು, ಈ ಕೆಳಕಂಡಂತೆ ವಿವಿಧ ಪದವಿ, ರ್‍ಯಾಂಕ್ ಮತ್ತು ಸ್ವರ್ಣ ಪದಕ ಪಡೆದ ವಿದ್ಯಾರ್ಥಿಗಳು/ಅಭ್ಯರ್ಥಿಗಳ ವಿವರ ಮಾಹಿತಿಗಳನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರ ಸಭೆಗಳ ಅನುಮೋದನೆ ಪಡೆಯಬೇಕಾಗಿರುತ್ತದೆ.

1. **ಡಾಕ್ಟರ್ ಆಫ್ ಫಿಲಾಸಫಿ (ಪಿ.ಹೆಚ್.ಡಿ.) ಪದವಿ ಪ್ರದಾನ ಅಭ್ಯರ್ಥಿಗಳ ವಿವರ:**

| ಕ್ರ. ಸಂ. | ವಿವರ | ಗಂಡು | ಹೆಣ್ಣು | ಒಟ್ಟು ವಿದ್ಯಾರ್ಥಿಗಳು |
|---|---|---|---|---|
| 01 | ಸಂಶೋಧನಾರ್ಥಿಗಳು (ಪಿಹೆಚ್.ಡಿ) | **40** | **30** | **70** |

2. **ವಿವಿಧ ಸ್ನಾತಕ / ಸ್ನಾತಕೋತ್ತರ ಪದವಿ ನೀಡಲಾಗುತ್ತಿರುವ ವಿದ್ಯಾರ್ಥಿಗಳ ವಿವರ:**

| ಕ್ರ. ಸಂ. | ವಿವರ | ಗಂಡು | ಹೆಣ್ಣು | ಒಟ್ಟು ವಿದ್ಯಾರ್ಥಿಗಳು | ಶೇಕಡವಾರು ಫಲಿತಾಂಶ |
|---|---|---|---|---|---|
| 01 | ಸ್ನಾತಕ ಪದವಿ | 4283 | 6401 | 10684 | 58.77 |
| 02 | ಸ್ನಾತಕೋತ್ತರ ಪದವಿ | 831 | 1191 | 2022 | 91.41 |
| | **ಒಟ್ಟು** | **5114** | **7592** | **12706** | |

3. **ವಿವಿಧ ಸ್ನಾತಕ / ಸ್ನಾತಕೋತ್ತರ ಪದವಿಗಳಲ್ಲಿ ಸ್ವರ್ಣ ಪದಕ ಪಡೆಯಲಿರುವ ಅರ್ಹ ಅಭ್ಯರ್ಥಿಗಳ ವಿವರ:**

| ಕ್ರ. ಸಂ. | ವಿವರ | ಗಂಡು | ಹೆಣ್ಣು | ಒಟ್ಟು ವಿದ್ಯಾರ್ಥಿಗಳು | ಒಟ್ಟು ಸ್ವರ್ಣ ಪದಕಗಳು |
|---|---|---|---|---|---|
| 01 | ಸ್ನಾತಕ ಪದವಿ | 02 | 11 | 13 | **22** |
| 02 | ಸ್ನಾತಕೋತ್ತರ ಪದವಿ | 08 | 24 | 32 | 65 |
| | **ಒಟ್ಟು** | **10** | **35** | **45** | **87** |

4. **ವಿವಿಧ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ವಿವರ :**

| ಕ್ರ. ಸಂ. | ವಿವರ | ಸ್ನಾತಕ ಪದವಿ | ಸ್ನಾತಕೋತ್ತರ ಪದವಿ | ಒಟ್ಟು ವಿದ್ಯಾರ್ಥಿಗಳು |
|---|---|---|---|---|
| 01 | 1ನೇ ರ್‍ಯಾಂಕ್ | 10 | 31 | **41** |
| 02 | 2ನೇ ರ್‍ಯಾಂಕ್ | 07 | 29 | **36** |
| 03 | 3ನೇ ರ್‍ಯಾಂಕ್ | 07 | 28 | **35** |
| 04 | 4 ರಿಂದ 10ನೇ ರ್‍ಯಾಂಕ್ | 51 | – | **51** |
| | **ಒಟ್ಟು** | **75** | **88** | **163** |

ತತ್ಸಂಬಂಧವಾಗಿ, ಈ ವಿಷಯವನ್ನು ದಿನಾಂಕ:29.01.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ., ಸ್ವರ್ಣ ಪದಕ(Gold Medal), ರ್‍ಯಾಂಕ್ ಪ್ರಮಾಣ ಪತ್ರ(Rank Certificate) ಹಾಗೂ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡುವ ಸಲುವಾಗಿ ಈ ಮೇಲ್ಕಂಡ ಪ್ರಸ್ತಾವನೆಗೆ ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ಸಿಂ.02(b)/(01/26) |

## –ಃಟಿಪ್ಪಣಿಃ–

**ವಿಷಯಃ ಬಾಡಿಗೆ ವಾಹನ, ಘಟಿಕೋತ್ಸವದ ತಿಂಡಿ/ಊಟೋಪಚಾರ ವ್ಯವಸ್ಥೆ, ಮತ್ತು ಸ್ವರ್ಣಪದಕ ಖರೀದಿ ಬಿಲ್‌ಗಳನ್ನು ಪಾವತಿಸಲು ಅನುಮೋದನೆ ನೀಡುವ ಬಗ್ಗೆ.**

*****

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಟೆಂಡರ್ / ದರಪಟ್ಟಿ ಪ್ರಕ್ರಿಯೆಗಳ ಮೂಲಕ ಪರೀಕ್ಷಾ ಕಾರ್ಯಗಳಿಗೆ ಪಡೆಯಲಾಗುವ ಬಾಡಿಗೆ ವಾಹನಗಳ ಸೇವೆಯ ಬಿಲ್ಲು, ಘಟಿಕೋತ್ಸವ ಸಮಾರಂಭಕ್ಕೆ ಆಗಮಿಸುವ ಅತಿಥಿಗಳು, ಗಣ್ಯರು, ವಿಶ್ವವಿದ್ಯಾನಿಲಯದ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತಿಂಡಿ/ಊಟೋಪಚಾರ ವ್ಯವಸ್ಥೆಗಳನ್ನು ಒದಗಿಸುವ ಬಿಲ್ಲು ಮತ್ತು ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ಸ್ವರ್ಣ ಪದಕಗಳನ್ನು ಖರೀದಿಸಿದ ಸೇವೆ/ಸರಬರಾಜು ಒದಗಿಸಿದ ಬಿಲ್ಲುಗಳನ್ನು ಸಂಬಂಧಿಸಿದ ಸಂಸ್ಥೆಗಳ ಮಾಲೀಕರುಗಳು ವಿಶ್ವವಿದ್ಯಾನಿಲಯದಕ್ಕೆ ಸಲ್ಲಿಸಿದ ನಂತರ, ನಿಯಮಾನುಸಾರ ಕ್ರಮಕೈಗೊಂಡು ಸಿಂಡಿಕೇಟ್ ಅನುಮೋದನೆ ಪಡೆದ ನಂತರ ಬಿಲ್ಲುಗಳನ್ನು ಪಾವತಿಗಾಗಿ ಹಣಕಾಸು ವಿಭಾಗಕ್ಕೆ ಕಳುಹಿಸಲಾಗುತ್ತಿರುವುದು ರೂಢಿಯಲ್ಲಿದೆ.

ಆದರೆ, ಸೇವೆ/ಸರಬರಾಜು ಒದಗಿಸಿದ ಸಂಸ್ಥೆಗಳ ಮಾಲೀಕರುಗಳು, ವಿಶ್ವವಿದ್ಯಾನಿಲಯದಿಂದ ಹಣ ಪಾವತಿಯು ಸಿಂಡಿಕೇಟ್ ಸಭೆಯ ನಿರ್ಣಯದ ನಂತರ ಪಾವತಿ ಮಾಡುವುದರಿಂದ 1–2 ತಿಂಗಳು ತಡವಾಗುವುದರಿಂದ ಸೇವೆ ಒದಗಿಸಲು ಸಮಸ್ಯೆಯಾಗುತ್ತಿದ್ದು ಜರೂರಾಗಿ ಹಣ ಪಾವತಿ ಮಾಡುವಂತೆ ಮೌಖಿಕವಾಗಿ ಮನವಿ ಮಾಡಿಕೊಂಡಿರುತ್ತಾರೆ.

ತತ್ಸಂಬಂಧವಾಗಿ, ಸರಬರಾಜುದಾರರ ಹಿತದೃಷ್ಠಿಯಿಂದ ಮೇಲೆ ವಿವರಿಸಿದಂತೆ, ಪರೀಕ್ಷಾ ವಿಭಾಗದಲ್ಲಿ 1) ಬಾಡಿಗೆ ವಾಹನ ಸೇವೆ 2) ಘಟಿಕೋತ್ಸವ ಸಮಾರಂಭಕ್ಕೆ ತಿಂಡಿ/ಊಟೋಪಚಾರ ವ್ಯವಸ್ಥೆ 3) ಸ್ವರ್ಣಪದಕ ಖರೀದಿಗಳ ಸೇವೆ/ಸರಬರಾಜು ಪಡೆದ ನಂತರ ಸಂಬಂಧಿಸಿದ ಸಂಸ್ಥೆಯ ಮಾಲೀಕರುಗಳಿಗೆ ಹಣ ಪಾವತಿಗೆ ಕ್ರಮಕೈಗೊಳ್ಳಲು ಹಾಗೂ ತದನಂತರ ಈ ವಿಷಯವನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಸ್ಥಿರೀಕರಣಕ್ಕಾಗಿ ಮಂಡಿಸಿ ಮುಂದಿನ ಕ್ರಮವಹಿಸುವ ಕುರಿತು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ – 1) ಬಾಡಿಗೆ ವಾಹನ ಸೇವೆ 2) ಘಟಿಕೋತ್ಸವ ಸಮಾರಂಭಕ್ಕೆ ತಿಂಡಿ/ಊಟೋಪಚಾರ ವ್ಯವಸ್ಥೆ 3) ಸ್ವರ್ಣಪದಕ 4) ಘಟಿಕೋತ್ಸವ ಪೆಂಡಾಲ್/ ಇತ್ಯಾದಿ 5) ಘಟಿಕೋತ್ಸವ ಮುದ್ರಣ/ಲೇಖನ ಸಾಮಗ್ರಿ ಖರೀದಿಗಳ ಸೇವೆ/ ಸರಬರಾಜು ಪಡೆದ ನಂತರ ಸಂಬಂಧಿಸಿದ ಸಂಸ್ಥೆಯ ಮಾಲೀಕರುಗಳಿಗೆ ಹಣ ಪಾವತಿ ಮಾಡಲು, ತದನಂತರ, ಸದರಿ ವಿಷಯವನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಸ್ಥಿರೀಕರಣಕ್ಕಾಗಿ ಮಂಡಿಸಿ ಅನುಮೋದನೆ ಪಡೆಯಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ಸಿಂ.02(c)/(01/26) |

## –:ಟಿಪ್ಪಣಿ:–

ವಿಷಯ: **ಮೆ: ಶ್ರೀ ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್ ಪ್ರೈಸಸ್ ಭದ್ರಾವತಿ – ಇವರಿಂದ ಜಿ.ಎಸ್.ಟಿ. ಮೊತ್ತ ರೂ.3,63,345=00 ಗಳನ್ನು ಕಟಾವಣೆ ಮಾಡಿಕೊಂಡು ಉಳಿಕೆ ಮೊತ್ತವನ್ನು ಪಾವತಿ ಮಾಡುವ ಬಗ್ಗೆ.**

*****

ಮೆ: ಶ್ರೀ ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್ ಪ್ರೈಸಸ್ ಭದ್ರಾವತಿ – ಇವರು 2018–19, 2019–20, 2020–21 ಮತ್ತು 2021–22ನೇ ಸಾಲಿನಲ್ಲಿ ಇ–ಟೆಂಡರ್ ಮೂಲಕ L1 ಬಿಡ್ಡರ್ ಆಗಿ ಆಯ್ಕೆಯಾಗಿ ಕರಾರು ದರ ಒಪ್ಪಂದದ ಮೂಲಕ ಸಾಮಾಗ್ರಿಗಳನ್ನು ಸರಬರಾಜು ಮಾಡಿರುತ್ತಾರೆ.

ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧಕರು ವಿಶ್ವವಿದ್ಯಾನಿಲಯದ ಲೆಕ್ಕ ತಪಾಸಣೆಯಲ್ಲಿ, ಇ–ಟೆಂಡರ್ ದಾಖಲಾತಿಗಳ ಪ್ರಕಾರ ಲೇಖನ/ಮುದ್ರಿತ ಲೇಖನ ಸಾಮಾಗ್ರಿಗಳ ದರಗಳು ಜಿ.ಎಸ್.ಟಿ ಒಳಗೊಂಡಿರುತ್ತವೆ. ಆದರೆ, ಕರಾರು ದರ ಒಪ್ಪಂದದಲ್ಲಿ ದರಗಳು ಜಿ.ಎಸ್.ಟಿ ಹೊರತುಪಡಿಸಿ ಎಂದು ಆಗಿರುತ್ತದೆ. ಪ್ರಯುಕ್ತ ಸರಬರಾಜುದಾರರಿಗೆ ಹೆಚ್ಚುವರಿ ಪಾವತಿ ಮಾಡಿರುವ ಮೊತ್ತವನ್ನು ವಸೂಲಾತಿಗೆ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.

**ವಸೂಲಾತಿ ವಿವರಗಳು:**

| ಕ್ರ. ಸಂ. | ವರ್ಷ | ಮೊತ್ತ |
|---|---|---|
| 01 | 2018–19 ಮತ್ತು 2019–20 | 2,14,997=00 |
| 02 | 2020–21 | 83,531=00 |
| 03 | 2021–22 | 54,857=00 |
| | ಒಟ್ಟು ರೂ. | **3,63,345=00** |

ಮೆ: ಶ್ರೀ ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್ ಪ್ರೈಸಸ್ ಭದ್ರಾವತಿ–ಇವರಿಗೆ ಲೇಖನ/ ಮುದ್ರಿತ ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡಿರುವ ಬಿಲ್‌ಗಳ ಬಾಬ್ತು ಒಟ್ಟು ರೂ.8,90,969=00 (ರೂ.8,20,759=00 ಮತ್ತು ರೂ.70,210=00)ಗಳನ್ನು ಪಾವತಿ ಮಾಡಬೇಕಾಗಿದ್ದು, ಈ ಮೇಲ್ಕಂಡ ಹಿನ್ನಲೆಯಲ್ಲಿ ತಾತ್ಕಲಿಕವಾಗಿ ತಡೆಹಿಡಿಯಲಾಗಿರುತ್ತದೆ.

ತತ್ಸಂಬಂಧವಾಗಿ, ಮೆ: ಶ್ರೀ ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್ ಪ್ರೈಸಸ್ ಭದ್ರಾವತಿ–ಇವರು ಸರಬರಾಜು ಮಾಡಿರುವ ಲೇಖನ/ ಮುದ್ರಿತ ಲೇಖನ ಸಾಮಾಗ್ರಿಗಳ ಬಿಲ್‌ಗಳ ಒಟ್ಟು ಮೊತ್ತ ರೂ.8,90,969=00 ಗಳನ್ನು ಕಾಲ ವಿಳಂಬ ಮನ್ನಾ ಮಾಡಿ ನಿಯಮಾನುಸಾರ ಪಾವತಿ ಮಾಡಲು ಹಾಗೂ ಸದರಿ ಮೊತ್ತದಲ್ಲಿ ಸರಬರಾಜುದಾರರಿಗೆ ಈಗಾಗಲೇ ಹೆಚ್ಚುವರಿ ಪಾವತಿ ಮಾಡಲಾಗಿರುವ ಜಿ.ಎಸ್.ಟಿ. ಮೊತ್ತ ರೂ.3,63,345=00ಗಳನ್ನು ಕಟಾವಣೆ ಮಾಡಿಕೊಂಡು ಉಳಿಕೆ ಮೊತ್ತವನ್ನು ಪಾವತಿ ಮಾಡಲು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**:: ನಿರ್ಣಯ ::**

ಮೆ: ಶ್ರೀ ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್ ಪ್ರೈಸಸ್ ಭದ್ರಾವತಿ–ಇವರು ಸರಬರಾಜು ಮಾಡಿರುವ ಲೇಖನ/ ಮುದ್ರಿತ ಲೇಖನ ಸಾಮಾಗ್ರಿಗಳ ಬಿಲ್‌ಗಳ ಒಟ್ಟು ಮೊತ್ತ ರೂ.8,90,969=00 ಗಳನ್ನು ಕಾಲ ವಿಳಂಬ ಮನ್ನಾ ಮಾಡಿ ನಿಯಮಾನುಸಾರ ಪಾವತಿ ಮಾಡಲು ಹಾಗೂ ಸದರಿ ಮೊತ್ತದಲ್ಲಿ ಸರಬರಾಜುದಾರರಿಗೆ ಈಗಾಗಲೇ ಹೆಚ್ಚುವರಿ ಪಾವತಿ ಮಾಡಲಾಗಿರುವ ಜಿ.ಎಸ್.ಟಿ. ಮೊತ್ತ ರೂ.3,63,345=00 ಗಳನ್ನು ಕಟಾವಣೆ ಮಾಡಿಕೊಂಡು ಉಳಿಕೆ ಮೊತ್ತವನ್ನು ನಿಯಮಾನುಸಾರ ಸದರಿ ಸಂಸ್ಥೆಯವರಿಗೆ ಪಾವತಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(01/26) |

## –:ಟಿಪ್ಪಣಿ:–

**ವಿಷಯ:** **ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವಾನ್ವಿತ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿರುವ ಗೌರವ ಡಾಕ್ಟರೇಟ್ ಪದವಿ ಪ್ರಶಸ್ತಿಗೆ ಪ್ರದಾನರಾಗಿರುವ ಮಹನೀಯರ ಪಟ್ಟಿಗೆ ಅನುಮೋದನೆ ನೀಡುವ ಕುರಿತು.**

*****

ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡ 09 (CV) ಮನವಿಗಳನ್ನು ದಿನಾಂಕ:30.12.2025 ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಘನತೆವೆತ್ತ ಮಾನ್ಯ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಘನತೆವೆತ್ತ ಮಾನ್ಯ ರಾಜ್ಯಪಾಲರು ಈ ಕೆಳಕಂಡ ಗಣ್ಯರುಗಳಿಗೆ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಗಳನ್ನು ಪ್ರದಾನ ಮಾಡಲು ಅನುಮೋದನೆ ನೀಡಿರುತ್ತಾರೆ.

**13ನೇ ವಾರ್ಷಿಕ ಘಟಿಕೋತ್ಸವದ ಗೌರವ ಡಾಕ್ಟರೇಟ್ ಪದವಿ ವಿವರ**

| ಕ್ರ. ಸಂ. | ಹೆಸರು | ಗೌರವ ಡಾಕ್ಟರೇಟ್ ಪದವಿ ಪ್ರದಾನ | ಸಾಧನೆ ಕ್ಷೇತ್ರದ ಮಾಹಿತಿ |
|---|---|---|---|
| 1. | ಪ್ರೊ. ಸಿ. ಹೆಚ್. ಮುರಿಗೇಂದ್ರಪ್ಪ | ಡಾಕ್ಟರ್ ಆಫ್ ಲಿಟರೇಚರ್ (D.Litt.) | ಶಿಕ್ಷಣ |
| 2. | ಶ್ರೀ ಎಂ. ರಾಮಪ್ಪ | ಡಾಕ್ಟರ್ ಆಫ್ ಲಿಟರೇಚರ್ (D.Litt.) | ಶಿಕ್ಷಣ ಮತ್ತು ಸಮಾಜ ಸೇವೆ |
| 3. | ಶ್ರೀ ಎಲ್. ರೇವಣ್ಣಸಿದ್ದಯ್ಯ | ಡಾಕ್ಟರ್ ಆಫ್ ಲಿಟರೇಚರ್ (D.Litt.) | ಸಮಾಜ ಸೇವೆ |

ಸದರಿ ವಿಷಯವನ್ನು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವಾನ್ವಿತ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿರುವ ಗೌರವ ಡಾಕ್ಟರೇಟ್ ಪದವಿ ಪ್ರಶಸ್ತಿಗೆ ಪ್ರದಾನರಾಗಿರುವ ಈ ಮೇಲ್ಕಂಡ ಮಹನೀಯರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರದಾನ ಮಾಡಲು ಸಭೆಯು ಒಮ್ಮತದಿಂದ ಒಪ್ಪಿಗೆ ನೀಡಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 7 | |
| --- | --- |
| ವಿಷಯ ಸಂಖ್ಯೆ: | ಸಿಂ.02(e)/(01/26) |

## –:ಟಿಪ್ಪಣಿ:–

**ವಿಷಯ:** **ಖಾಲಿ ಸೈದ್ಧಾಂತಿಕ ಉತ್ತರ ಪತ್ರಿಕೆಗಳ ಖರೀದಿಯ ಬಿಲ್ಲನ್ನು ಪಾವತಿ ಮಾಡುವ ಸಂಬಂಧ ಉಪಸಮಿತಿ ಸಭಾ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸುತ್ತಿರುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.01.2026

*****

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:28.01.2026ರಂದು ಮಧ್ಯಾಹ್ನ 04:00 ಗಂಟೆಗೆ ಕುಲಸಚಿವರು (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡ (ಇ–ಟೆಂಡರ್) ಸಂಸ್ಥೆಯವರಿಂದ ಖರೀದಿಸಿದ ಖಾಲಿ ಸೈದ್ಧಾಂತಿಕ ಉತ್ತರ ಪತ್ರಿಕೆಗಳ ವಿವರ ಮತ್ತು ಬಿಲ್‌ಗಳ ಮಾಹಿತಿಗಳನ್ನು ಸಮಿತಿಯು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ, ಈ ಕೆಳಕಂಡ ರೂ.28,30,500–00 ಗಳನ್ನು (ರೂಪಾಯಿಗಳು ಇಪ್ಪತ್ತೆಂಟು ಲಕ್ಷದ ಮೂವತ್ತು ಸಾವಿರದ ಐದು ನೂರು ಮಾತ್ರ) ಸಂಬಂಧಿಸಿದ ಸಂಸ್ಥೆಯವರಿಗೆ ಪಾವತಿ ಮಾಡಲು ಸಮಿತಿಯು ಸಭೆಯಲ್ಲಿ ಶಿಫಾರಸ್ಸು ಮಾಡಲಾಯಿತು.

| ಕ್ರ ಸಂ. | ಸರಬರಾಜು ಸಂಸ್ಥೆಯ ಹೆಸರು | ವಿವರ | ಒಟ್ಟು ಹುಂಡಿ ಮೊತ್ತ |
| --- | --- | --- | --- |
| **01** | M/s Orient Press LTD, Bangalore | Sl. No.: 01; Bill No: TP/25-26/0447; Bill Date: 10.01.2026; Amount: 28,30,500/-; **Total Rs. 28,30,500=00**; **Total Rs. (Rupees Twenty Eight Lakhs Thirty Thousand Five Hundred only)** | 28,30,500=00 |

ಈ ಹಿನ್ನೆಲೆಯಲ್ಲಿ, ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಹಾಗೂ M/s Orient Press Ltd., Bangalore – ಇವರಿಗೆ ರೂ.28,30,500–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:29.01.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗಕ್ಕೆ ಇ–ಟೆಂಡರ್ ಮೂಲಕ ಕರಾರು ದರ ಒಪ್ಪಂದ ಮಾಡಿಕೊಂಡು M/s. Orient Press Ltd, Bangalore – ಈ ಸಂಸ್ಥೆಯವರಿಂದ ಖಾಲಿ ಸೈದ್ಧಾಂತಿಕ ಉತ್ತರ ಪತ್ರಿಕೆಗಳನ್ನು ಖರೀದಿಸಲಾಗಿರುವ ಬಾಬ್ತು ರೂ.28,30,500–00 ಗಳ ಬಿಲ್ಲುಗಳನ್ನು ದಿನಾಂಕ:28.01.2026 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿದ ನಂತರ ಖರೀದಿ ಬಿಲ್ಲಿನ ಬಾಬ್ತು ರೂ.28,30,500–00 ಗಳನ್ನು M/s. Orient Press Ltd, Bangalore - ಇವರಿಗೆ ನಿಯಮಾನುಸಾರ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 8 | |
|---|---|
| ವಿಷಯ ಸಂಖ್ಯೆ: | ಸಿಂ.02(f)/(01/26) |

# –ಃಟಿಪ್ಪಣಿಃ–

ವಿಷಯಃ **M/s Logisys, Bengaluru – ಈ ಸಂಸ್ಥೆಯವರಿಂದ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲಾದ ಸೇವಾ ಶುಲ್ಕವನ್ನು ಪಾವತಿಸುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.01.2026

*****

ವಿಶ್ವವಿದ್ಯಾನಿಲಯದಲ್ಲಿ CBCS ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯಗಳಿಗೆ ಸೇವೆ ಪಡೆಯಲು ನಿಯಮಾನುಸಾರ M/s Logisys, Bengaluru – ಈ ಸಂಸ್ಥೆಯವರೊಂದಿಗೆ ಕರಾರು ದರ ಒಪ್ಪಂದವನ್ನು ಮುಂದುವರೆಸಲಾಗಿದೆ (ಇ–ಟೆಂಡರ್). ಸದರಿ ಸಂಸ್ಥೆಯವರಿಂದ ವಿಶ್ವವಿದ್ಯಾನಿಲಯದಲ್ಲಿ ಜೂನ್/ಜುಲೈ/ಆಗಸ್ಟ್/ಡಿಸೆಂಬರ್–2025ರ ಮಾಹೆಗಳಲ್ಲಿ ನಡೆಸಲಾದ ವಿವಿಧ ಸ್ನಾತಕ/ ಸ್ನಾತಕೋತ್ತರ ಪರೀಕ್ಷೆಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲಾಗಿದೆ.

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:28.01.2026ರಂದು ಮಧ್ಯಾಹ್ನ 04:00 ಗಂಟೆಗೆ ಕುಲಸಚಿವರು (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, M/s Logisys, Bengaluru – ಈ ಸಂಸ್ಥೆಯವರು ಪರೀಕ್ಷಾ ತಂತ್ರಾಂಶ ಸೇವೆ ಒದಗಿಸಿದ್ದಕ್ಕಾಗಿ (1ನೇ, 2ನೇ, 3ನೇ ಮತ್ತು ಅಂತಿಮ ಕಂತು) ಈ ಕೆಳಕಂಡಂತೆ ಪರೀಕ್ಷಾ ಸೇವಾ ಶುಲ್ಕ ರೂ.4,85,500=00ಗಳನ್ನು (ರೂಪಾಯಿ ನಾಲ್ಕು ಲಕ್ಷದ ಎಂಬತ್ತೈದು ಸಾವಿರದ ಐದು ನೂರು ಮಾತ್ರ) ಪಾವತಿಗಾಗಿ ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ.

| Bill No | Bill Date | Amount |
|---|---|---|
| 1. BN/121/25-26 | 18.12.2025 | 1,45,650=00 |
| 2. BN/122/25-26 | 18.12.2025 | 1,45,650=00 |
| 3. BN/123/25-26 | 18.12.2025 | 1,45,650=00 |
| 4. BN/124/25-26 | 18.12.2025 | 48,550=00 |
| | ಒಟ್ಟು ರೂ. | **4,85,500=00** |

ತತ್ಸಂಬಂಧವಾಗಿ ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಹಾಗೂ M/s Logisys, Bengaluru–ಇವರಿಗೆ ರೂ.4,85,500=00ಗಳನ್ನು ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:29.01.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ CBCS ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯಗಳಿಗೆ ಸೇವೆ ಪಡೆಯಲು ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡು M/s Logisys, Bengaluru – ಈ ಸಂಸ್ಥೆಯವರಿಂದ ವಿಶ್ವವಿದ್ಯಾನಿಲಯದಲ್ಲಿ ಜೂನ್/ಜುಲೈ/ಆಗಸ್ಟ್/ ಡಿಸೆಂಬರ್–2025ರ ಮಾಹೆಗಳಲ್ಲಿ ನಡೆಸಲಾದ ವಿವಿಧ ಸ್ನಾತಕ/ ಸ್ನಾತಕೋತ್ತರ ಪರೀಕ್ಷೆಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲಾದ ಸೇವಾ ಶುಲ್ಕದ ಬಾಬ್ತು ರೂ.4,85,500–00 ಗಳ ಬಿಲ್ಲುಗಳನ್ನು ದಿನಾಂಕ:28.01.2026 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿದ ನಂತರ ಖರೀದಿ ಬಿಲ್ಲಿನ ಬಾಬ್ತು ರೂ.4,85,500–00 ಗಳನ್ನು M/s Logisys, Bengaluru - ಇವರಿಗೆ ನಿಯಮಾನುಸಾರ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 9 | |
|---|---|
| ವಿಷಯ ಸಂಖ್ಯೆ: | ಸಿಂ.02(g)/(01/26) |

## –:ಟಿಪ್ಪಣಿ:–

ವಿಷಯ: **M/s Uniclare Solutions Pvt., Ltd., Bengaluru – ಈ ಸಂಸ್ಥೆಯವರಿಂದ ಸ್ನಾತಕ / ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲಾದ ಸೇವಾ ಶುಲ್ಕವನ್ನು ಪಾವತಿಸುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.01.2026

*****

ವಿಶ್ವವಿದ್ಯಾನಿಲಯದಲ್ಲಿ CBCS ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯಗಳಿಗೆ ಸೇವೆ ಪಡೆಯಲು ನಿಯಮಾನುಸಾರ M/s Uniclare Solutions Pvt., Ltd., Bengaluru – ಈ ಸಂಸ್ಥೆಯವರೊಂದಿಗೆ ಕರಾರು ದರ ಒಪ್ಪಂದವನ್ನು ಮುಂದುವರೆಸಲಾಗಿದೆ (ಇ–ಟೆಂಡರ್). ಸದರಿ ಸಂಸ್ಥೆಯವರಿಂದ ವಿಶ್ವವಿದ್ಯಾನಿಲಯದಲ್ಲಿ ಜೂನ್/ಜುಲೈ/ಆಗಸ್ಟ್/ಡಿಸೆಂಬರ್–2025ರ ಮಾಹೆಗಳಲ್ಲಿ ನಡೆಸಲಾದ ವಿವಿಧ ಸ್ನಾತಕ/ ಸ್ನಾತಕೋತ್ತರ ಪರೀಕ್ಷೆಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲಾಗಿದೆ.

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:28.01.2026ರಂದು ಮಧ್ಯಾಹ್ನ 04:00 ಗಂಟೆಗೆ ಕುಲಸಚಿವರು (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, M/s Uniclare Solutions Pvt., Ltd., Bengaluru – ಈ ಸಂಸ್ಥೆಯವರು ಪರೀಕ್ಷಾ ತಂತ್ರಾಂಶ ಸೇವೆ ಒದಗಿಸಿದ್ದಕ್ಕಾಗಿ (1ನೇ, 2ನೇ, 3ನೇ ಮತ್ತು ಅಂತಿಮ ಕಂತು) ಈ ಕೆಳಕಂಡಂತೆ ಪರೀಕ್ಷಾ ಸೇವಾ ಶುಲ್ಕ ರೂ.2,91,300=00ಗಳನ್ನು (ರೂಪಾಯಿ ಎರಡು ಲಕ್ಷದ ತೊಂಭತ್ತೊಂದು ಸಾವಿರದ ಮೂರು ನೂರು ಮಾತ್ರ) ಪಾವತಿಗಾಗಿ ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ.

| Bill No | | Bill Date | Amount |
|---|---|---|---|
| 1. | BN/UC/032/25-26 | 18.12.2025 | 87,390=00 |
| 2. | BN/UC/033/25-26 | 18.12.2025 | 87,390=00 |
| 3. | BN/UC/034/25-26 | 18.12.2025 | 87,390=00 |
| 4. | BN/UC/035/25-26 | 18.12.2025 | 29,130=00 |
| | | ಒಟ್ಟು ರೂ. | **2,91,300=00** |

ತತ್ಸಂಬಂಧವಾಗಿ, ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಹಾಗೂ M/s Uniclare Solutions Pvt., Ltd., Bengaluru – ಈ ಸಂಸ್ಥೆಯವರಿಗೆ ರೂ.2,91,300=00ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:29.01.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದಲ್ಲಿ CBCS ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯಗಳಿಗೆ ಸೇವೆ ಪಡೆಯಲು ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡು M/s Uniclare Solutions Pvt., Ltd., Bengaluru – ಈ ಸಂಸ್ಥೆಯವರಿಂದ ವಿಶ್ವವಿದ್ಯಾನಿಲಯದಲ್ಲಿ ಜೂನ್/ಜುಲೈ/ಆಗಸ್ಟ್/ಡಿಸೆಂಬರ್–2025ರ ಮಾಹೆಗಳಲ್ಲಿ ನಡೆಸಲಾದ ವಿವಿಧ ಸ್ನಾತಕ/ ಸ್ನಾತಕೋತ್ತರ ಪರೀಕ್ಷೆಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲಾದ ಸೇವಾ ಶುಲ್ಕದ ಬಾಬ್ತು ರೂ.2,91,300–00 ಗಳ ಬಿಲ್ಲುಗಳನ್ನು ದಿನಾಂಕ:28.01.2026 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿದ ನಂತರ ಖರೀದಿ ಬಿಲ್ಲಿನ ಬಾಬ್ತು ರೂ.2,91,300–00 ಗಳನ್ನು M/s Uniclare Solutions Pvt., Ltd., Bengaluru - ಇವರಿಗೆ ನಿಯಮಾನುಸಾರ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 10 | |
|---|---|
| ವಿಷಯ ಸಂಖ್ಯೆ: | ಸಿಂ.02(h)/(01/26) |

## –ಃಟಿಪ್ಪಣಿಃ–

**ವಿಷಯಃ ಬಾಡಿಗೆ ವಾಹನಗಳ ಸೇವಾ ಪಡೆದ ಬಿಲ್ಲನ್ನು ಪಾವತಿ ಮಾಡುವ ಸಂಬಂಧ ಉಪಸಮಿತಿ ಸಭಾ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸುತ್ತಿರುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.01.2026

*****

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:28.01.2026ರಂದು ಮಧ್ಯಾಹ್ನ 04:00 ಗಂಟೆಗೆ ಕುಲಸಚಿವರು (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಉಪಸಮಿತಿಯು ಸಭೆಯಲ್ಲಿ ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ, ಇ–ಟೆಂಡರ್ ಪ್ರಕ್ರಿಯೆಗಳ ಮೂಲಕ ಕರಾರು ದರ ಒಪ್ಪಂದ ಮಾಡಿಕೊಂಡ ಸಂಸ್ಥೆಯವರಿಂದ ಪಡೆದ ಬಾಡಿಗೆ ವಾಹನಗಳ ಸೇವಾ ವಿವರಗಳನ್ನು ಮತ್ತು ಬಿಲ್‌ಗಳ ಮಾಹಿತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ, ಈ ಕೆಳಕಂಡ ಸಂಸ್ಥೆಯವರಿಗೆ ರೂ.**11,20,494**–00 ಗಳನ್ನು (ರೂಪಾಯಿ ಹನ್ನೊಂದು ಲಕ್ಷದ ಇಪ್ಪತ್ತು ಸಾವಿರದ ನಾಲ್ಕು ನೂರು ತೊಂಬತ್ತಾನ್ನಾಲ್ಕು ಮಾತ್ರ) ಪಾವತಿ ಮಾಡಲು ಶಿಫಾರಸ್ಸು ಮಾಡಿರುತ್ತದೆ.

| ಕ್ರ. ಸಂ. | ಸಂಸ್ಥೆಯ ಹೆಸರು | ವಿವರ | ಹುಂಡಿ ಮೊತ್ತ ರೂ.ಗಳಲ್ಲಿ |
|---|---|---|---|
| 01 | M/s Sri Hari Group's & Travels, Davangere. | ಡಿಸೆಂಬರ್–2025/ಜನವರಿ–2026ರಲ್ಲಿ ನಡೆದ ಸ್ನಾತಕ ಪದವಿ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನಗಳ ಸೇವೆಯನ್ನು ಪಡೆದ ಬಾಬ್ತು. | **11,20,494–00** |
| | | **ಒಟ್ಟು** | **11,20,494–00** |
| (ರೂಪಾಯಿ ಹನ್ನೊಂದು ಲಕ್ಷದ ಇಪ್ಪತ್ತು ಸಾವಿರದ ನಾಲ್ಕು ನೂರು ತೊಂಬತ್ತಾನ್ನಾಲ್ಕು ಮಾತ್ರ) | | | |

ಈ ಹಿನ್ನೆಲೆಯಲ್ಲಿ, ಉಪ ಸಮಿತಿ ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳ ಸಭಾ ನಡಾವಳಿಗಳನ್ನು ಹಾಗೂ M/s. Sri Hari Group's & Travels, Davangere ಇವರಿಗೆ ರೂ.**11,20,494**–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:29.01.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ, ಇ-ಟೆಂಡರ್ ಪ್ರಕ್ರಿಯೆಗಳ ಮೂಲಕ ಕರಾರು ದರ ಒಪ್ಪಂದ ಮಾಡಿಕೊಂಡು M/s. Sri Hari Group's & Travels, Davangere – ಈ ಸಂಸ್ಥೆಯವರಿಂದ ಕಾರುಗಳನ್ನು ಬಾಡಿಗೆಗಾಗಿ ಪಡೆಯಲಾದ ಸೇವಾ ಶುಲ್ಕದ ಬಾಬ್ತು ರೂ.11,20,494–00 ಗಳ ಬಿಲ್ಲುಗಳನ್ನು ದಿನಾಂಕ:28.01.2026 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿದ ನಂತರ ಖರೀದಿ ಬಿಲ್ಲಿನ ಬಾಬ್ತು ರೂ.11,20,494–00 ಗಳನ್ನು M/s. Sri Hari Group's & Travels, Davangere - ಇವರಿಗೆ ನಿಯಮಾನುಸಾರ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                        ಕುಲಪತಿಗಳು

| ಬಿ.ಓ.ಎಸ್. ವಿಭಾಗ – 11 | |
|---|---|
| ವಿಷಯ ಸಂಖ್ಯೆ: | ಸಿಂ.03(a)/(01/26) |

## –: ಟಿಪ್ಪಣಿ :–

ವಿಷಯಃ ವಿಶ್ವವಿದ್ಯಾನಿಲಯದ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡುವ ಕುರಿತು

ಉಲ್ಲೇಖ:
1. ವಿ.ವಿ. ಅಧಿಸೂಚನೆ ಸಂಖ್ಯೆಃ ದಾವಿವಿ/ಪ್ರಾಧಿ/ಅಮಂ/188/2025–26/2585 ದಿನಾಂಕಃ 12.09.2025
2. ಪ್ರೊ. ಗಾಯಿತ್ರಿ ದೇವರಾಜ ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ ಇವರ ಮನವಿ ಪತ್ರದ ದಿನಾಂಕ:09.01.2026
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ:23.01.2026

*********

ಮಾನ್ಯ ಕುಲಪತಿಗಳ ಆದೇಶಾನುಸಾರ ಪ್ರೊ. ರಾಮಲಿಂಗಪ್ಪ ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರನ್ನು ಸ್ನಾತಕ ಮತ್ತು ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ಮಂಡಳಿಗೆ ದಿನಾಂಕಃ12.09.2025ರಿಂದ ಅನ್ವಯವಾಗುವಂತೆ 03 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡಿ ಉಲ್ಲೇಖ (1)ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು.

ಮುಂದುವರೆದು, ಪ್ರೊ. ಗಾಯಿತ್ರಿ ದೇವರಾಜ ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರು ಜೇಷ್ಠತಾ ಪಟ್ಟಿಗನುಗುಣವಾಗಿ ಹಾಗೂ ಸರದಿಯನುಸಾರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡುವಂತೆ ಉಲ್ಲೇಖಿತ (2)ರ ಪತ್ರದಲ್ಲಿ ಕೋರಿರುತ್ತಾರೆ. ಮೇಲ್ಕಂಡ ವಿಷಯದ ಅಧ್ಯಯನ ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡುವ ಬಗ್ಗೆ ದಿನಾಂಕಃ29.01.2026ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಸಲ್ಲಿಸಿದೆ.

### :: ನಿರ್ಣಯ ::

ಪ್ರೊ. ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು ವಿಶ್ವವಿದ್ಯಾನಿಲಯದ ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡುವ ವಿಷಯವನ್ನು ಮುಂದೂಡಲಾಯಿತು. ಮುಂದುವರೆದು, ಕಾನೂನು ಸಲಹೆ ಪಡೆದ ನಂತರ ಮುಂದಿನ ಕ್ರಮ ಜರುಗಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು	ಕುಲಪತಿಗಳು

| ಮಾ.ಸ.ನಿ. ವಿಭಾಗ – 12 | |
|---|---|
| ವಿಷಯ ಸಂಖ್ಯೆ: | ಸಿಂ.04(a)/(01/26) |

## –ಃ ಟಿಪ್ಪಣಿ ಃ–

**ವಿಷಯಃ ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರು – Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ಕೋರಿರುವ ಕುರಿತು.**

ಉಲ್ಲೇಖ: 1. ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು ಇವರ ಮನವಿ ದಿನಾಂಕಃ 02.01.2026

2. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ09.01.2026

*********

ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕಃ14.02.2026 ರಿಂದ 18.02.2026ರವರೆಗೆ International House of Education, Bengaluru ಮತ್ತು Suranaree University of Technology, Thailand ಇವರುಗಳ ಸಹಯೋಗದೊಂದಿಗೆ Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಆಹ್ವಾನಿತ ಭಾಷಣಗಾರರಾಗಿ ಆಹ್ವಾನಿಸಿರುವ ಹಿನ್ನೆಲೆಯಲ್ಲಿ ದಿನಾಂಕಃ13.02.2026 ರಿಂದ 18.02.2026ರವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) ಹೋಗಿ ಬರಲು ಅನುಮತಿ ನೀಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ದಿನಾಂಕಃ13.02.2026 ರಿಂದ 18.02.2026 ರವರೆಗೆ (ಪ್ರಯಾಣ ದಿನಗಳನ್ನೊಳಗೊಂಡಂತೆ) Suranaree University of Technology, Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಆಹ್ವಾನಿತ ಭಾಷಣಗಾರರಾಗಿ ಭಾಗವಹಿಸಲು ಅನುಮತಿ ನೀಡುವ ಕುರಿತು ದಿನಾಂಕಃ29.01.2026 ರಂದು ನಡೆಯಲಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕಃ13.02.2026 ರಿಂದ 18.02.2026 ರವರೆಗೆ International House of Education, Bengaluru ಮತ್ತು Suranaree University of Technology, Thailand ಇವರುಗಳ ಸಹಯೋಗದೊಂದಿಗೆ Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಆಹ್ವಾನಿತ ಭಾಷಣಗಾರರಾಗಿ ಭಾಗವಹಿಸಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ – 13 | |
|---|---|
| ವಿಷಯ ಸಂಖ್ಯೆ: | ಸಿಂ.04(b)/(01/26) |

## –ಃ ಟಿಪ್ಪಣಿ ಃ–

ವಿಷಯಃ **ಪ್ರೊ. ಪ್ರಸನ್ನಕುಮಾರ ಬಿ.ಸಿ., ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರು – Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಕೋರಿರುವ ಕುರಿತು.**

ಉಲ್ಲೇಖ: 1. ಪ್ರೊ. ಪ್ರಸನ್ನಕುಮಾರ ಬಿ.ಸಿ. ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆಃ ದಾವಿವಿ/ಗಅ/ 2025-26/200, ದಿನಾಂಕಃ 16.01.2026

2. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ 23.01.2026

*********

ಪ್ರೊ. ಪ್ರಸನ್ನಕುಮಾರ ಬಿ.ಸಿ., ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕಃ14.02.2026 ರಿಂದ 18.02.2026ರವರೆಗೆ International House of Education, Bengaluru ಮತ್ತು Suranaree University of Technology, Thailand ಇವರುಗಳ ಸಹಯೋಗದೊಂದಿಗೆ Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಿರುವ ಹಿನ್ನೆಲೆಯಲ್ಲಿ ದಿನಾಂಕಃ13.02.2026 ರಿಂದ 18.02.2026ರವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಪ್ರೊ. ಪ್ರಸನ್ನಕುಮಾರ ಬಿ.ಸಿ., ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ದಿನಾಂಕಃ13.02.2026 ರಿಂದ 18.02.2026 ರವರೆಗೆ (ಪ್ರಯಾಣ ದಿನಗಳನ್ನೊಳಗೊಂಡಂತೆ) Suranaree University of Technology, Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಲು ದಿನಾಂಕಃ29.01.2026 ರಂದು ನಡೆಯಲಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ಪ್ರೊ. ಪ್ರಸನ್ನಕುಮಾರ ಬಿ.ಸಿ., ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕಃ13.02.2026 ರಿಂದ 18.02.2026 ರವರೆಗೆ International House of Education, Bengaluru ಮತ್ತು Suranaree University of Technology, Thailand ಇವರುಗಳ ಸಹಯೋಗದೊಂದಿಗೆ Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಭಾಗವಹಿಸಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ – 14 | |
|---|---|
| ವಿಷಯ ಸಂಖ್ಯೆ: | ಸಿಂ.04(c)/(01/26) |

## –: ಟಿಪ್ಪಣಿ :–

**ವಿಷಯ: ಪ್ರೊ. ಪ್ರಮೋದ್ ಎಸ್.ಎನ್. ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರತಂತ್ರಜ್ಞಾನ ಅಧ್ಯಯನ ವಿಭಾಗ, ಇವರು – Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಕೋರಿರುವ ಕುರಿತು.**

ಉಲ್ಲೇಖ:
1. ಪ್ರೊ. ಪ್ರಮೋದ್ ಎಸ್.ಎನ್. ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆ: ದಾವಿವಿ/ಆತ /134/2025-26/200, ದಿನಾಂಕ: 21.01.2026
2. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 23.01.2026

*********

ಪ್ರೊ. ಪ್ರಮೋದ್ ಎಸ್.ಎನ್., ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕ:14.02.2026 ರಿಂದ 18.02.2026ರವರೆಗೆ International House of Education, Bengaluru ಮತ್ತು Suranaree University of Technology, Thailand ಇವರುಗಳ ಸಹಯೋಗದೊಂದಿಗೆ Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಆಹ್ವಾನಿತ ಭಾಷಣಗಾರರಾಗಿ ಆಹ್ವಾನಿಸಿರುವ ಹಿನ್ನೆಲೆಯಲ್ಲಿ ದಿನಾಂಕ:13.02.2026 ರಿಂದ 18.02.2026ರವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) ಹೋಗಿ ಬರಲು ಅನುಮತಿ ನೀಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಪ್ರೊ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರತಂತ್ರಜ್ಞಾನ ಅಧ್ಯಯನ ವಿಭಾಗ – ಇವರಿಗೆ ದಿನಾಂಕ:13.02.2026 ರಿಂದ 18.02.2026 ರವರೆಗೆ (ಪ್ರಯಾಣ ದಿನಗಳನ್ನೊಳಗೊಂಡಂತೆ) Suranaree University of Technology, Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಆಹ್ವಾನಿತ ಭಾಷಣಗಾರರಾಗಿ ಭಾಗವಹಿಸಲು ಅನುಮತಿ ನೀಡುವ ಕುರಿತು ದಿನಾಂಕ:29.01.2026 ರಂದು ನಡೆಯಲಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ಪ್ರೊ. ಪ್ರಮೋದ್ ಎಸ್.ಎನ್., ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕ:13.02.2026 ರಿಂದ 18.02.2026 ರವರೆಗೆ International House of Education, Bengaluru ಮತ್ತು Suranaree University of Technology, Thailand ಇವರುಗಳ ಸಹಯೋಗದೊಂದಿಗೆ Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಆಹ್ವಾನಿತ ಭಾಷಣಗಾರರಾಗಿ ಭಾಗವಹಿಸಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಮಾ.ಸ.ನಿ. ವಿಭಾಗ – 15 | |
|---|---|
| ವಿಷಯ ಸಂಖ್ಯೆ: | ಸಿಂ.04(d)/(01/26) |

# –: ಟಿಪ್ಪಣಿ :–

**ವಿಷಯಃ ಡಾ. ಪ್ರಸನ್ನ ಬಿ.ಕೆ, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಇವರು ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಗೆ ನಿರಾಕ್ಷೇಪಣಾ ಪತ್ರ ನೀಡುವಂತೆ ಕೋರಿರುವ ಬಗ್ಗೆ.**

ಉಲ್ಲೇಖ:
1. ಡಾ. ಪ್ರಸನ್ನ ಬಿ.ಕೆ, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮನವಿ ದಿನಾಂಕಃ 16.06.2025
2. ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕಃ 09.09.2025
3. ಸರ್ಕಾರದ ಪತ್ರ ಸಂಖ್ಯೆಃ ಇಡಿ 243 ಯುಎನ್ಇ 2025, ದಿನಾಂಕಃ 23.07.2025
4. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆಃ ದಾವಿವಿ/ಮಾಸನಿ/289/2025-26/3212, ದಿನಾಂಕಃ 28.10.2025
5. ಡಾ. ಪ್ರಸನ್ನ ಬಿ.ಕೆ., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಇವರ ಮನವಿ ದಿನಾಂಕಃ 19.01.2026
6. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ 23.01.2026

*********

ಡಾ. ಪ್ರಸನ್ನ ಬಿ.ಕೆ, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು – ಇವರು ಪ್ರಸ್ತುತ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗೆ ನೇಮಕ ಮಾಡಿಕೊಳ್ಳಲು ಅನುಮತಿ ಹಾಗೂ ನಿರಾಕ್ಷೇಪಣಾ ಪತ್ರವನ್ನು ನೀಡುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ಕೋರಿರುತ್ತಾರೆ. ಈ ಕುರಿತು ಸದರಿ ವಿಷಯವನ್ನು ದಿನಾಂಕಃ 09.09.2025 ರಂದು ನಡೆದ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯಲ್ಲಿ ಸದರಿ ಹುದ್ದೆಯು ಖಾಲಿ ಇರುವ ಬಗ್ಗೆ ಅಥವಾ ಸದರಿ ಹುದ್ದೆಗೆ ಸರಿಸಮಾನಾದ ಹುದ್ದೆ ಇರುವುದರ ಬಗ್ಗೆ ಪರಿಶೀಲಿಸಿಕೊಂಡು ನಂತರ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ ನಿರ್ಣಯಿಸಲಾಗಿರುತ್ತದೆ.

ಮುಂದುವರೆದು, ಡಾ. ಪ್ರಸನ್ನ ಬಿ.ಕೆ. – ಇವರನ್ನು ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲು ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆ ಖಾಲಿಯಿರುವ ಬಗ್ಗೆ ಹಾಗೂ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಸರ್ಕಾರದ ಉಲ್ಲೇಖಿತ (3)ರ ಪತ್ರದಲ್ಲಿ ನಿರ್ದೇಶನ ನೀಡಿರುತ್ತಾರೆ. ಸದರಿ ಪತ್ರಕ್ಕೆ ಸಂಬಂಧಿಸಿದಂತೆ ಉಲ್ಲೇಖ (4)ರ ಪತ್ರದಲ್ಲಿ ಸರ್ಕಾರಕ್ಕೆ ಮಾಹಿತಿಯನ್ನು ನೀಡಲಾಗಿದೆ.

ತದನಂತರ ಉಲ್ಲೇಖ (5)ರ ಪತ್ರದಲ್ಲಿ ಡಾ. ಪ್ರಸನ್ನ ಬಿ.ಕೆ. ಇವರು ಆಡಳಿತಾತ್ಮಕ ಹಿತ ದೃಷ್ಟಿಯಿಂದ ಹುದ್ದೆ ರಹಿತವಾಗಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮೂಲಕ ನೇಮಕ ಮಾಡಿಕೊಳ್ಳಲು ಅಗತ್ಯ ನಿರಾಕ್ಷೇಪಣ ಪತ್ರ ನೀಡುವಂತೆ ಕೋರಿರುತ್ತಾರೆ. ಕುವೆಂಪು ವಿಶ್ವವಿದ್ಯಾನಿಲಯದಿಂದ ಶ್ರೀ ರಾಜಕುಮಾರ ಎಂ.ಎಸ್., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು – ಇವರು ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗೆ ವರ್ಗಾವಣೆಗೊಂಡು ದಿನಾಂಕಃ30.01.2021ರಂದು ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರಾಗಿ ವಯೋ ನಿವೃತ್ತಿ ಹೊಂದಿರುತ್ತಾರೆ. ಸದರಿಯವರ ನಿವೃತ್ತಿಯಿಂದ ವಿಶ್ವವಿದ್ಯಾನಿಲಯದಲ್ಲಿ ಸಹಾಯ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಯು ಖಾಲಿಯಿರುತ್ತದೆ. ಈ ಕುರಿತು ಉಲ್ಲೇಖ (6)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಡಾ. ಪ್ರಸನ್ನ ಬಿ.ಕೆ. ಇವರ ಮನವಿಯ ಬಗ್ಗೆ ದಿನಾಂಕಃ29.01.2026 ರಂದು ನಡೆಯಲಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ಮುಂದುವರೆದಿದೆ...

ಕುಲಸಚಿವರು                    ಕುಲಪತಿಗಳು

:: ನಿರ್ಣಯ ::

ಡಾ. ಪ್ರಸನ್ನ ಬಿ.ಕೆ, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು – ಇವರನ್ನು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಸ್ತುತ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಗೆ ಹುದ್ದೆ ರಹಿತವಾಗಿ ವರ್ಗಾವಣೆ ಮೂಲಕ ನೇಮಕ ಮಾಡಿಕೊಳ್ಳಲು ವಿಶ್ವವಿದ್ಯಾನಿಲಯದಿಂದ ಅನುಮತಿ ಹಾಗೂ ನಿರಾಕ್ಷೇಪಣಾ ಪತ್ರವನ್ನು ನೀಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು. ಮುಂದುವರೆದು, ಸದರಿ ವಿಷಯದ ಕುರಿತು ಸರ್ಕಾರಕ್ಕೆ ಸ್ಪಷ್ಟ ಮಾಹಿತಿಯನ್ನು ನೀಡಲು ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಕ್ರೀಡಾ ವಿಭಾಗ – 16 | |
|---|---|
| ವಿಷಯ ಸಂಖ್ಯೆ: | ಸಿಂ.05(a)/(01/26) |

## –: ಟಿಪ್ಪಣಿ :–

ವಿಷಯ: **2023–24ನೇ ಸಾಲಿನಲ್ಲಿ ಅಖಿಲ ಭಾರತ/ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ/ರಾಜ್ಯ/ ರಾಷ್ಟ್ರ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡಿದ ವಿಶ್ವವಿದ್ಯಾನಿಲಯ ಪ್ರತಿಭಾನ್ವಿತ ಅರ್ಹ 50 ಕ್ರೀಡಾಪಟುಗಳಿಗೆ ವಿಶ್ವವಿದ್ಯಾನಿಲಯದ ಕ್ರೀಡಾ ಶಿಷ್ಯವೇತನ ಪಾವತಿ ಮಾಡುವ ಕುರಿತು.**

*********

ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:22.12.2025ರಂದು ವಿಶ್ವವಿದ್ಯಾನಿಲಯ ಕ್ರೀಡಾ ವಿಭಾಗದಲ್ಲಿ ಕ್ರೀಡಾ ಶಿಷ್ಯವೇತನ ಸಮಿತಿ ಸಭೆಯನ್ನು ಏರ್ಪಡಿಸಲಾಗಿತ್ತು.

ಈ ಸಭೆಯಲ್ಲಿ 2023–24ನೇ ಸಾಲಿನ ದಕ್ಷಿಣ ವಲಯ ಮತ್ತು ಅಖಿಲ ಭಾರತ ವಿಶ್ವವಿದ್ಯಾನಿಲಯ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಕ್ರೀಡಾಪಟುಗಳಿಗೆ, ಕ್ರೀಡಾ ವಿಭಾಗಕ್ಕೆ ಬಂದ ಅರ್ಜಿ ನಮೂನೆಗಳನ್ನು ಸದಸ್ಯರುಗಳು ಆಯ್ಕೆ ಪ್ರಕ್ರಿಯೆ ಮೂಲಕ ಪರಿಶೀಲಿಸಿ ಅಂತಿಮಗೊಳಿಸಲಾಯಿತು ಹಾಗೂ ಕ್ರೀಡಾ ಶೀಷ್ಯವೇತನವನ್ನು ಕ್ರೀಡಾಪಟುಗಳಿಗೆ ವಿತರಿಸಲು ತೀರ್ಮಾನಿಸಲಾಯಿತು.

ಅರ್ಹ 50 ಜನ ಕ್ರೀಡಾಪಟುಗಳಿಗೆ ತಲಾ ರೂ.3,000/– ಗಳಂತೆ, ಒಟ್ಟು 1,50,000/– (ರೂಪಾಯಿ. ಒಂದು ಲಕ್ಷ ಐವತ್ತು ಸಾವಿರ ಮಾತ್ರ) ಗಳನ್ನು ಅಯ್ಕೆಯಾದ ಕ್ರೀಡಾಪಟುಗಳ ಬ್ಯಾಂಕ್ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್. ಅಥವಾ ಎನ್.ಇ.ಎಫ್.ಟಿ. ಮೂಲಕ ಪಾವತಿ ಮಾಡಲು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

2023–24ನೇ ಸಾಲಿನ ದಕ್ಷಿಣ ವಲಯ ಮತ್ತು ಅಖಿಲ ಭಾರತ ವಿಶ್ವವಿದ್ಯಾನಿಲಯ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಅರ್ಹ 50 ಕ್ರೀಡಾಪಟುಗಳಿಗೆ ಕ್ರೀಡಾ ಸಲಹಾ ಸಮಿತಿಯ ನಿರ್ಣಯದನುಸಾರ ಪ್ರತಿ ವಿದ್ಯಾರ್ಥಿಗೆ ತಲಾ 3,000/– ರೂ. ಗಳನ್ನು ಕ್ರೀಡಾಪಟುಗಳ ಬ್ಯಾಂಕ್ ಖಾತೆಗೆ ನೇರವಾಗಿ ಆರ್.ಟಿ.ಜಿ.ಎಸ್. ಅಥವಾ ಎನ್.ಇ.ಎಫ್.ಟಿ. ಮೂಲಕ ನಿಯಮಾನುಸಾರ ಪಾವತಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                                        ಕುಲಪತಿಗಳು

| ಶೈಕ್ಷಣಿಕ ವಿಭಾಗ – 17 | |
|---|---|
| ವಿಷಯ ಸಂಖ್ಯೆ: | ಸಿಂ.06(a)/(01/26) |

## –ः ಟಿಪ್ಪಣಿ ः–

**ವಿಷಯಃ** **ಶ್ರೀ ಹೆಚ್.ಬಿ. ದೇವರಾಜ್, ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ಸ್ವರ್ಣ ಪದಕ ಪ್ರದಾನ ಮಾಡಲು ರೂ.2,20,000/– ಗಳ ಚೆಕ್‌ನ್ನು ನೀಡಿರುವ ಕುರಿತು.**

**ಉಲ್ಲೇಖ:** 1. ಶ್ರೀ ಹೆಚ್.ಬಿ. ದೇವರಾಜ್ ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ. ಇವರ ಮನವಿ ಪತ್ರದ ದಿನಾಂಕ:17.01.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.01.2026

*********

ಶ್ರೀ ಹೆಚ್.ಬಿ. ದೇವರಾಜ್., ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರು ತಮ್ಮ ಪತ್ನಿಯಾದ **ದಿ|| ಪ್ರೊ. ಅನಿತ ಹೆಚ್.ಎಸ್. ಪ್ರಾಧ್ಯಾಪಕರು ಇವರ ಹೆಸರಿನಲ್ಲಿ** ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ **ಎಂ.ಕಾಂ.** ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಶಿವಗಂಗೋತ್ರಿ ಆವರಣದ ವಿದ್ಯಾರ್ಥಿಗೆ ಮತ್ತು **ಬಿ.ಕಾಂ.** ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ ಸ್ವರ್ಣ ಪದಕವನ್ನು 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲು ರೂ.2,20,000/– ಗಳ (ಚೆಕ್ ನಂ.744526,744527 ದಿನಾಂಕ:19.01.2026) ಚೆಕ್ಕನ್ನು ನೀಡಿರುತ್ತಾರೆ. ಈ ಕುರಿತಂತೆ ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ **ಎಂ.ಕಾಂ.** ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಶಿವಗಂಗೋತ್ರಿ ಆವರಣದ ವಿದ್ಯಾರ್ಥಿಗೆ ಮತ್ತು **ಬಿ.ಕಾಂ.** ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ **ದಿ|| ಪ್ರೊ. ಅನಿತ ಹೆಚ್.ಎಸ್. ಪ್ರಾಧ್ಯಾಪಕರು** ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ – 18 | |
|---|---|
| ವಿಷಯ ಸಂಖ್ಯೆ: | ಶಿಂ.06(b)/(01/26) |

## –: ಟಿಪ್ಪಣಿ :–

ವಿಷಯಃ ವಿಶ್ವವಿದ್ಯಾನಿಲಯದ 2025–26ನೇ ಶೈಕ್ಷಣಿಕ ಸಾಲಿನ ಎಂ.ಕಾಂ. ಪದವಿಯ ಪ್ರವೇಶಾತಿಗೆ ಹೆಚ್ಚುವರಿ ಸೀಟ್ ಮ್ಯಾಟ್ರಿಕ್ಸ್ ಅನುಮೋದನೆ ನೀಡುವ ಕುರಿತು.

*********

ವಿಶ್ವವಿದ್ಯಾನಿಲಯದ 2025–26ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ – ಅಧ್ಯಕ್ಷರು, ಸ್ನಾತಕೋತ್ತರ ಎಂ.ಕಾಂ. ಅಧ್ಯಯನ ವಿಭಾಗ – ಇವರು ಹೆಚ್ಚುವರಿ ಸೀಟುಗಳಿಗೆ ಪ್ರವೇಶ ಮಿತಿಯನ್ನು ನಿಗದಿಪಡಿಸಿ ಪರಿಷ್ಕೃತ ಪ್ರಸ್ತಾವಿತ ಸೀಟ್ ಮ್ಯಾಟ್ರಿಕ್ಸ್‌ನ್ನು ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸಿರುತ್ತಾರೆ. ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಈ ಕೆಳಕಂಡ ಸೀಟ್ ಮ್ಯಾಟ್ರಿಕ್ಸ್‌ನ್ನು ಅನುಮೋದಿಸಲಾಗಿರುತ್ತದೆ.

### Existing Merit Seat Matrix - 2025-26

| Sl. No | Centre | GM (44%) | SC (17%) | ST (7%) | C1 (4%) | 2A (15%) | 2B (4%) | 3A (4%) | 3B (5%) | KM | NSS | NCC | SG | SP | DQ | PH | OU | HK | TOTAL |
|---|---|---|---|---|---|---|---|---|---|---|---|---|---|---|---|---|---|---|---|
| 1 | Shivaganogtri Main Campus | 29 | 11 | 04 | 02 | 09 | 02 | 02 | 03 | 01 | 01 | 01 | 01 | 01 | 01 | 01 | 09 | 05 | 83 |

### Additional Intake Merit Seats 2025-26

| Sl. No | Centre | GM (44%) | SC (17%) | ST (7%) | C1 (4%) | 2A (15%) | 2B (4%) | 3A (4%) | 3B (5%) | OU (15%) | HK (8%) | TOTAL |
|---|---|---|---|---|---|---|---|---|---|---|---|---|
| 1 | Shivaganogtri Main Campus | 28 | 04 | 01 | 04 | - | 01 | - | 04 | 02 | - | 44 |

ಸದರಿ ವಿಷಯವನ್ನು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ 2025–26ನೇ ಶೈಕ್ಷಣಿಕ ಸಾಲಿನ ಎಂ.ಕಾಂ. ಪದವಿಯ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಮೇಲ್ಕಂಡ ಹೆಚ್ಚುವರಿ ಪ್ರವೇಶ ಮಿತಿಯ ಸೀಟ್ ಮ್ಯಾಟ್ರಿಕ್ಸ್‌ನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ – 19 | |
|---|---|
| ವಿಷಯ ಸಂಖ್ಯೆ: | ಸಿಂ.06(c)/(01/26) |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಚಿನ್ನದ ಪದಕ ನೀಡುವ ಕುರಿತು.**

**ಉಲ್ಲೇಖ:**
1. ಅಧ್ಯಕ್ಷರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣ ಇವರ ಪತ್ರ ಸಂಖ್ಯೆ:ದಾವಿವಿ:ರಾಜ್ಯಶಾಸ್ತ್ರ/80/2025-26, ದಿ:14.01.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:19.01.2026

*********

ಪ್ರೊ. ಅಶೋಕ್ ವೀ. ಪಾಳೇದ, ಪ್ರಾಧ್ಯಾಪಕರು ಇವರು ತಮ್ಮ ತಂದೆ-ತಾಯಿಯವರಾದ ಶ್ರೀಮತಿ ನಂದ್ಯಮ್ಮ ಶ್ರೀ ವೀರಪ್ಪ ನಿಂಗಪ್ಪ ಪಾಳೇದ ಇವರ ಹೆಸರಿನಲ್ಲಿ ಎಂ.ಎ. ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಇವರು ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ ಸ್ವರ್ಣ ಪದಕವನ್ನು ವಿತರಿಸಲು ದತ್ತಿ ನಿಧಿ ದೇಣಿಗೆ ನೀಡಿದ್ದರು. ಈಗ, ಶ್ರೀಯುತರು ಉಲ್ಲೇಖ(1)ರ ಮನವಿ ಪತ್ರದಲ್ಲಿ ಸ್ವರ್ಣ ಪದಕವನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಎಂ.ಎ. ರಾಜ್ಯಶಾಸ್ತ್ರ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ವಿತರಿಸುವಂತೆ ಕೋರಿರುತ್ತಾರೆ. ಉಲ್ಲೇಖ (2)ರಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ **ರಾಜ್ಯಶಾಸ್ತ್ರ** ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ ಶಿವಗಂಗೋತ್ರಿ ಆವರಣದ ವಿದ್ಯಾರ್ಥಿಗೆ **ಶ್ರೀಮತಿ ನಂದ್ಯಮ್ಮ ಶ್ರೀ ವೀರಪ್ಪ ನಿಂಗಪ್ಪ ಪಾಳೇದ** ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು | ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 20 | |
|---|---|
| ವಿಷಯ ಸಂಖ್ಯೆ: | ಸಿಂ.06(a)/(01/26) |

# –: ಟಿಪ್ಪಣಿ :–

**ವಿಷಯಃ** **ದಾವಣಗೆರೆ ವಿಶ್ವವಿದ್ಯಾನಿಲಯದ ಮಹಿಳಾ ವಸತಿ ನಿಲಯಕ್ಕೆ ವಿದ್ಯುತ್ ಸಾಮಗ್ರಿಗಳನ್ನು ಸರಬರಾಜು ಮಾಡುವ ಕುರಿತು.**

ಉಲ್ಲೇಖ: ನಿಲಯಪಾಲರು, ಮಹಿಳಾ ವಸತಿ ನಿಲಯ ಇವರ ಪತ್ರಸಂಖ್ಯೆ: ದಾವಿವಿ:ಮವನಿ:256:2025–2 ದಿನಾಂಕ:11.09.2025

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಸರಸ್ವತಿ, ಗಂಗೋತ್ರಿ ಮತ್ತು ತುಂಗಾ (03) ಮಹಿಳಾ ವಸತಿ ನಿಲಯಗಳಲ್ಲಿನ ಕೆಲವು ವಿದ್ಯುತ್ ಸಾಮಗ್ರಿಗಳು ಹಾಳಾಗಿದ್ದು ಹಾಗೂ ಕೆಲವು ಹೊಸದಾಗಿ ಖರೀದಿಸಿ ಅಳವಡಿಸುವಂತೆ ನಿಲಯಪಾಲಕರು ಮಹಿಳಾ ವಸತಿ ನಿಲಯ ಇವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. ಆದ್ದರಿಂದ, ವಿದ್ಯುತ್ ಸಾಮಗ್ರಿಗಳನ್ನು ಖರೀದಿಸಿ ಅಳವಡಿಸಲು ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಸರಸ್ವತಿ, ಗಂಗೋತ್ರಿ ಮತ್ತು ತುಂಗಾ (03) ಮಹಿಳಾ ವಸತಿ ನಿಲಯಗಳಿಗೆ ಅವಶ್ಯಕವಾಗಿ ಬೇಕಾಗಿರುವ ವಿದ್ಯುತ್ ಸಾಮಗ್ರಿಗಳನ್ನು ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಆಧಾರದ ಮೇಲೆ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 21 | |
|---|---|
| ವಿಷಯ ಸಂಖ್ಯೆ: | ಸಿಂ.06(b)/(01/26) |

# –: ಟಿಪ್ಪಣಿ :–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವದ ಹಿನ್ನೆಲೆಯಲ್ಲಿ ಜ್ಞಾನಸೌಧ ಕಟ್ಟಡಕ್ಕೆ & ಅತಿಥಿ ಗೃಹಕ್ಕೆ ಬಣ್ಣದ ಲೇಪನ ಮಾಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಹಿನ್ನೆಲೆಯಲ್ಲಿ ಜ್ಞಾನಸೌಧ ಕಟ್ಟಡಕ್ಕೆ & ಅತಿಥಿ ಗೃಹಕ್ಕೆ ಬಣ್ಣದ ಲೇಪನ ಮಾಡಿಸುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಅಂದಾಜು ಮೊತ್ತ ರೂ.5.00/–ಲಕ್ಷದ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಸಿವಿಲ್ ಗುತ್ತಿಗೆದಾರರ ಮುಖಾಂತರ ಕಾಮಗಾರಿ ಕೈಗೊಳ್ಳಲು ದಿನಾಂಕಃ29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಹಿನ್ನೆಲೆಯಲ್ಲಿ ಜ್ಞಾನಸೌಧ ಕಟ್ಟಡಕ್ಕೆ & ಅತಿಥಿ ಗೃಹಕ್ಕೆ ಬಣ್ಣದ ಲೇಪನ ಮಾಡಿಸುವ ಕಾಮಗಾರಿಯನ್ನು ಅಂದಾಜು ಮೊತ್ತ ರೂ.5.00/–ಲಕ್ಷದ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಆಧಾರದ ಮೇಲೆ ಸಿವಿಲ್ ಗುತ್ತಿಗೆದಾರರ ಮುಖಾಂತರ ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 22 | |
|---|---|
| ವಿಷಯ ಸಂಖ್ಯೆ: | ಸಿಂ.06(c)/(01/26) |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಎಂ.ಸಿ.ಎ ಅಧ್ಯಯನ ವಿಭಾಗದ ಕಟ್ಟಡದಲ್ಲಿನ Office Aluminium partition & Grill Partition ಕೆಲಸ ಕಾರ್ಯಗಳನ್ನು ಮಾಡಿಸುವ ಕುರಿತು.**

ಉಲ್ಲೇಖ: ಅಧ್ಯಕ್ಷರು, ಎಂ.ಸಿ.ಎ. ಅಧ್ಯಯನ ವಿಭಾಗ, ದಾವಿವಿ ಇವರ ಪತ್ರಸಂಖ್ಯೆ:DU/MCA/2025-26/445.

*********

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ ಎಂ.ಸಿ.ಎ ಅಧ್ಯಯನ ವಿಭಾಗದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ತರಗತಿ ಕೊಠಡಿಗಳ ಕಟ್ಟಡವನ್ನು ದಿನಾಂಕ:30.01.2026 ರಂದು ಗೌರವಾನ್ವಿತ ರಾಜ್ಯಪಾಲರಿಂದ ಉದ್ಘಾಟನೆ ಮಾಡಲು ಉದ್ದೇಶಿಸಲಾಗಿರುವುದರಿಂದ ಕಟ್ಟಡದಲ್ಲಿನ Office Aluminium partition & Grill partition ಕೆಲಸಗಳನ್ನು ತುರ್ತಾಗಿ ಮಾಡಿಸಿಕೊಡಬೇಕೆಂದು ಉಲ್ಲೇಖಿತ ಪತ್ರದಲ್ಲಿ ಅಧ್ಯಕ್ಷರು, ಎಂ.ಸಿ.ಎ ಅಧ್ಯಯನ ವಿಭಾಗ ಇವರು ಕೋರಿರುತ್ತಾರೆ. ಆದ್ದರಿಂದ, ಅಂದಾಜು ಮೊತ್ತ ರೂ.5.00/–ಲಕ್ಷದ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕಃ29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ ಎಂ.ಸಿ.ಎ ಅಧ್ಯಯನ ವಿಭಾಗದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ತರಗತಿ ಕೊಠಡಿಗಳ ಕಟ್ಟಡವನ್ನು ದಿನಾಂಕ:30.01.2026 ರಂದು ಗೌರವಾನ್ವಿತ ರಾಜ್ಯಪಾಲರಿಂದ ಉದ್ಘಾಟನೆ ಮಾಡಲು ಉದ್ದೇಶಿಸಲಾಗಿರುವುದರಿಂದ ಕಟ್ಟಡದಲ್ಲಿನ Office Aluminium partition & Grill partition ಕೆಲಸಗಳನ್ನು ಅಂದಾಜು ಮೊತ್ತ ರೂ.5.00/–ಲಕ್ಷದ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 23 | |
|---|---|
| ವಿಷಯ ಸಂಖ್ಯೆ: | ಸಿಂ.06(d)/(01/26) |

# –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಎಂ.ಸಿ.ಎ ಅಧ್ಯಯನ ವಿಭಾಗದ ಕಟ್ಟಡದಲ್ಲಿರುವ ಹಳೆ ಕಟ್ಟಡದ ಮೆಟ್ಟಿಲುಗಳ ಹತ್ತಿರ ಮತ್ತು ಇನ್ನಿತರ ಕಡೆ ಪೇಂಟ್ ಮಾಡಿಸುವ ಕೆಲಸ ಕಾರ್ಯಗಳನ್ನು ಮಾಡಿಸುವ ಕುರಿತು.**

ಉಲ್ಲೇಖ: ಅಧ್ಯಕ್ಷರು, ಎಂ.ಸಿ.ಎ. ಅಧ್ಯಯನ ವಿಭಾಗ, ದಾವಿವಿ ಇವರ ಪತ್ರಸಂಖ್ಯೆ:DU/MCA/2025-26/445.

*********

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ ಎಂ.ಸಿ.ಎ ಅಧ್ಯಯನ ವಿಭಾಗದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ತರಗತಿ ಕೊಠಡಿಗಳ ಕಟ್ಟಡವನ್ನು ದಿನಾಂಕ:30.01.2026 ರಂದು ಗೌರವಾನ್ವಿತ ರಾಜ್ಯಪಾಲರಿಂದ ಉದ್ಘಾಟನೆ ಮಾಡಲು ಉದ್ದೇಶಿಸಲಾಗಿರುವುದರಿಂದ ಕಟ್ಟಡದಲ್ಲಿನ ಹಳೆ ಕಟ್ಟಡದ ಮೆಟ್ಟಿಲುಗಳ ಹತ್ತಿರ ಮತ್ತು ಇನ್ನಿತರ ಕಡೆ ಪೇಂಟ್ ಮಾಡಿಸುವ ಕೆಲಸಗಳನ್ನು ತುರ್ತಾಗಿ ಮಾಡಿಸಿಕೊಡಬೇಕೆಂದು ಉಲ್ಲೇಖಿತ ಪತ್ರದಲ್ಲಿ ಅಧ್ಯಕ್ಷರು, ಎಂ.ಸಿ.ಎ ಅಧ್ಯಯನ ವಿಭಾಗ ಇವರು ಕೋರಿರುತ್ತಾರೆ. ಆದ್ದರಿಂದ, ಅಂದಾಜು ಮೊತ್ತ ರೂ.5.00/– ಲಕ್ಷದ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ ಎಂ.ಸಿ.ಎ ಅಧ್ಯಯನ ವಿಭಾಗದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ತರಗತಿ ಕೊಠಡಿಗಳ ಕಟ್ಟಡವನ್ನು ದಿನಾಂಕ:30.01.2026 ರಂದು ಗೌರವಾನ್ವಿತ ರಾಜ್ಯಪಾಲರಿಂದ ಉದ್ಘಾಟನೆ ಮಾಡಲು ಉದ್ದೇಶಿಸಲಾಗಿರುವುದರಿಂದ ಕಟ್ಟಡದಲ್ಲಿನ ಹಳೆ ಕಟ್ಟಡದ ಮೆಟ್ಟಿಲುಗಳ ಹತ್ತಿರ ಮತ್ತು ಇನ್ನಿತರ ಕಡೆ ಪೇಂಟ್ ಮಾಡಿಸುವ ಕೆಲಸಗಳನ್ನು ಅಂದಾಜು ಮೊತ್ತ ರೂ.5.00/–ಲಕ್ಷದ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                ಕುಲಪತಿಗಳು

| ಮಾ.ಸ.ನಿ. ವಿಭಾಗ – 24 | |
|---|---|
| ವಿಷಯ ಸಂಖ್ಯೆ: | ಸಿಂ.04(e)/(01/26) |

## –: ಟಿಪ್ಪಣಿ :–

**ವಿಷಯ:** **ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ಇವರನ್ನು ಪ್ರಾಧ್ಯಾಪಕರ ಹುದ್ದೆಯಿಂದ ಬಿಡುಗಡೆಗೊಳಿಸುವ ಕುರಿತು.**

ಉಲ್ಲೇಖ:
1. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ದಾವಿವಿ/ಮಾಸನಿ/634/2025–26/3094, ದಿನಾಂಕ: 18.10.2025
2. ಕೇಂದ್ರೀಯ ವಿಶ್ವವಿದ್ಯಾನಿಲಯ, ಕಲಬುರ್ಗಿ ಇವರ ಆದೇಶ ಸಂಖ್ಯೆ: CUK/ Recruitment/F-26/2025-26/242/01, dated: 26.01.2026
3. ಪ್ರೊ. ವೆಂಕಟರಾವ್ ಎಂ. ಪಲಾಟೆ, ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆ: ದಾವಿವಿ/ಇತಿಹಾಸ/2025–26, ದಿನಾಂಕ: 27.01.2026
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 27.01.2026

*********

ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರಿಗೆ ಉಲ್ಲೇಖಿತ (1)ರ ಪತ್ರದಲ್ಲಿ ಕಲಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾನಿಲಯದಿಂದ ಆಹ್ವಾನಿಸಿರುವ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣ ಪ್ರಮಾಣ ಪತ್ರ ನೀಡಲಾಗಿತ್ತು.

ಮುಂದುವರೆದು, ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ ಇವರನ್ನು ಉಲ್ಲೇಖ (2)ರ ಆದೇಶದಲ್ಲಿ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿಯಾಗಿರುವ ಹಿನ್ನೆಲೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ 02 ವರ್ಷಗಳ ಮರುಧಾರಣಾಧಿಕಾರ (Lien) ಆಧಾರದ ಮೇಲೆ ಬಿಡುಗಡೆಗೊಳಿಸುವಂತೆ ಉಲ್ಲೇಖಿತ (3)ರ ಪತ್ರದಲ್ಲಿ ಸದರಿಯವರು ಕೋರಿರುತ್ತಾರೆ. ಈ ಕುರಿತು ಸದರಿ ವಿಷಯವನ್ನು ದಿನಾಂಕ:29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ ಇವರು ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ – ಇಲ್ಲಿ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿಯಾಗಿರುವ ಹಿನ್ನೆಲೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಹುದ್ದೆಯ ಕರ್ತವ್ಯದಿಂದ 02 ವರ್ಷಗಳ ಮರುಧಾರಣಾಧಿಕಾರ (Lien) ಆಧಾರದ ಮೇಲೆ ಕೆ.ಸಿ.ಎಸ್. ನಿಯಮಗಳನುಸಾರ ಬಿಡುಗಡೆಗೊಳಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು          ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 25 | |
|---|---|
| ವಿಷಯ ಸಂಖ್ಯೆ: | ಸಿಂ.06(e)/(01/26) |

## –: ಟಿಪ್ಪಣಿ :–

**ವಿಷಯಃ ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (CMCRI) ಚಿತ್ರದುರ್ಗ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯ ಸಂಸ್ಥೆಗಳು ಮಾಡಿಕೊಂಡ ಒಪ್ಪಂದವನ್ನು ಪರಿಷ್ಕೃತಗೊಳಿಸುವ ಕುರಿತು.**

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಇಡಿ 12 ಯುಎನ್ಇ 2023 ದಿನಾಂಕ:19.07.2023
2. ಕರಾರು ಒಪ್ಪಂದ ದಿನಾಂಕ:11.08.2023.
3. ನಿರ್ದೇಶಕರು, ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಚಿತ್ರದುರ್ಗ ಇವರ ಪತ್ರ ಸಂಖ್ಯೆ:ವೈಕಾಚಿ/ಜಿ/ಆಡಳಿತ/ MOU ದಾವಿವಿ/81/2025–26 ದಿನಾಂಕ:20.05.2025
4. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ ಜಿ.ಆರ್. ಹಳ್ಳಿ ಇವರ ಪತ್ರದ ಸಂಖ್ಯೆ:ದಾವಿವಿ/ಸ್ನಾಕೇಚಿ/199/2024–25 ದಿನಾಂಕ:23.01.2026

*********

ಚಿತ್ರದುರ್ಗ ಜಿಲ್ಲೆಯ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯನ್ನು (CMCRI) 2023–24ನೇ ಸಾಲಿನಿಂದ ಪ್ರಾರಂಭಿಸಲು ಚಿತ್ರದುರ್ಗ ತಾಲ್ಲೂಕು, ಜಿ.ಆರ್. ಹಳ್ಳಿ ಗ್ರಾಮದ ಬಳಿ ಇರುವ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಆವರಣದಲ್ಲಿನ ತರಗತಿ ಕೊಠಡಿಗಳನ್ನು ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (CMCRI), ಚಿತ್ರದುರ್ಗ ಇವರಿಗೆ ಎರಡು ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಉಲ್ಲೇಖ (01)ರ ಸರ್ಕಾರದ ನಿರ್ದೇಶನದಂತೆ ಹಾಗೂ ವಿಶ್ವವಿದ್ಯಾನಿಲಯದ ದಿನಾಂಕ:31.07.2023 ರಂದು ನಡೆದ ಸಿಂಡಿಕೇಟ್ ನಿರ್ಣಯದಂತೆ ಉಲ್ಲೇಖ (02)ರಲ್ಲಿ ಕರಾರು ಒಪ್ಪಂದ ಮಾಡಿಕೊಂಡು ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಒಪ್ಪಂದವು ದಿನಾಂಕ:11.08.2025ಕ್ಕೆ ಪೂರ್ಣಗೊಳ್ಳುವುದರಿಂದ, ಉಲ್ಲೇಖ (03)ರಲ್ಲಿ ವೈದ್ಯಕೀಯ ಕಾಲೇಜಿನ ಕಾಮಗಾರಿ ಪೂರ್ಣಗೊಳ್ಳುವವರೆಗೆ ಈಗಾಗಲೇ ಚಿತ್ರದುರ್ಗ ವೈದ್ಯಕೀಯ ಕಾಲೇಜಿಗೆ ಪೂರೈಸಿರುವ ಕೊಠಡಿಗಳೊಂದಿಗೆ ಇನ್ನೂ ಹೆಚ್ಚುವರಿಯಾಗಿ 04 ಬೋಧನಾ ಕೊಠಡಿಗಳು ಹಾಗೂ ಪ್ರಯೋಗ ಶಾಲೆಗೆ 04 ಕೊಠಡಿಗಳು ಒಟ್ಟು 08 ಕೊಠಡಿಗಳನ್ನು ಕೋರಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಸರ್ಕಾರಕ್ಕೂ ಸಲ್ಲಿಸಿರುತ್ತಾರೆ.

ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಚಿತ್ರದುರ್ಗ, ಉಲ್ಲೇಖ (02) ರಂತೆ ಇವರೊಂದಿಗೆ ದಿನಾಂಕ:11.08.2023 ರಂದು ಮಾಡಿಕೊಂಡ ಕರಾರು ಒಪ್ಪಂದವು ದಿನಾಂಕ:11.08.2025ರಂದು ಪೂರ್ಣಗೊಂಡಿರುತ್ತದೆ.

ವೈದ್ಯಕೀಯ ಶಿಕ್ಷಣ ಇಲಾಖೆಗೆ ಸ್ಥಳಾವಕಾಶವನ್ನು ನೀಡಿರುವ ಅವಧಿಯು ಮುಕ್ತಾಯವಾಗಿರುವುದರಿಂದ ಹೊಸದಾಗಿ ಕೊಠಡಿಗಳ ಸೇರ್ಪಡೆಯೊಂದಿಗೆ 02 ವರ್ಷಗಳ ಒಪ್ಪಂದದ ಅವಧಿಯನ್ನು ತಾತ್ಕಾಲಿಕವಾಗಿ ಪರಿಷ್ಕೃತಗೊಳಿಸಲು ಉಲ್ಲೇಖಿತ (04) ರಲ್ಲಿ ಡೀನರು ಹಾಗೂ ನಿರ್ದೇಶಕರು, ಚಿತ್ರದುರ್ಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಇವರು ಕೋರಿರುತ್ತಾರೆ.

**ಮುಂದುವರೆದಿದೆ..**

ಕುಲಸಚಿವರು

ಕುಲಪತಿಗಳು

**ಷರತ್ತುಗಳು:**

1. ಸ್ನಾತಕೋತ್ತರ ಕೇಂದ್ರವಾದ ಜ್ಞಾನಗಂಗೋತ್ರಿ ಆವರಣದಲ್ಲಿ ಕೊಠಡಿಗಳನ್ನು ತಾತ್ಕಾಲಿಕವಾಗಿ ಯಾವ ಉದ್ದೇಶವಾಗಿ ನೀಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
2. ಜ್ಞಾನಗಂಗೋತ್ರಿ ಆವರಣದಲ್ಲಿ ತಾತ್ಕಾಲಿಕವಾಗಿ ತರಗತಿ ಕೊಠಡಿಗಳನ್ನು ನೀಡಲಾಗಿದ್ದು, ಖಾಸಗಿ ಹಕ್ಕನ್ನು ತಾತ್ಕಾಲಿಕವಾಗಿ ಸೃಷ್ಟಿಸತಕ್ಕದ್ದಲ್ಲ ಮತ್ತು ಪರಭಾರೆ ಮಾಡತಕ್ಕದ್ದಲ್ಲ.
3. ಚಿತ್ರದುರ್ಗ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯವರು ತಮ್ಮದೇ ಆದ ಪೀಠೋಪಕರಣಗಳನ್ನು ಬಳಸಿಕೊಳ್ಳತಕ್ಕದ್ದು.
4. ಕಟ್ಟಡದ ನಿರ್ವಹಣೆಯ ಜವಾಬ್ದಾರಿ, ಸ್ವಚ್ಛತೆ, ನೀರು, ವಿದ್ಯುತ್ ವೆಚ್ಚ ಹಾಗೂ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಸಂಪೂರ್ಣ ಭದ್ರತೆ ನಡೆಸುವ ಜವಾಬ್ದಾರಿ ಮಾಡಿಕೊಳ್ಳತಕ್ಕದ್ದು ಹಾಗೂ ವಿಶ್ವವಿದ್ಯಾನಿಲಯ ನಿಗದಿಪಡಿಸುವ ವಿದ್ಯುತ್ ವೆಚ್ಚ & ನೀರಿನ ವೆಚ್ಚವನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯವರ ವತಿಯಿಂದ ಪಾವತಿ ಮಾಡತಕ್ಕದ್ದು.
5. ಕರಾರು ಅವಧಿ ಮುಕ್ತಾಯವಾದ ನಂತರ ಸುಪರ್ದಿ ಪಡೆದ ಕಟ್ಟಡಗಳನ್ನು ಮರು ಹಸ್ತಾಂತರ ಮಾಡುವ ಸಂದರ್ಭದಲ್ಲಿ ಹಾನಿಗೊಳಗಾಗಿದ್ದಲ್ಲಿ ದುರಸ್ತಿಗಳನ್ನು ಮಾಡಿಸಿ, ಉಪಯೋಗಿಸಿದ ಎಲ್ಲ ಕಟ್ಟಡಕ್ಕೆ ಪೇಂಟ್ ಮಾಡಿಸಿ, ಕಟ್ಟಡವನ್ನು ಸುಸ್ಥಿತಿಯಲ್ಲಿ ಹಸ್ತಾಂತರ ಮಾಡತಕ್ಕದ್ದು.
6. ಮಾನ್ಯ ಕುಲಪತಿಗಳು ದಾವಣಗೆರೆ ವಿಶ್ವವಿದ್ಯಾನಿಲಯ, ಇವರ ಅನುಮತಿ ಪಡೆಯದೇ ಅನುಮತಿಸಿರುವ ಕಟ್ಟಡ ಹೊರತುಪಡಿಸಿ ಬೇರೆ ಕಟ್ಟಡದಲ್ಲಿ ಮತ್ತು ಸಂಸ್ಥೆಯ ಆವರಣದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಅಥವಾ ಬದಲಾವಣೆಯನ್ನು ಮಾಡುವಂತಿಲ್ಲ.
7. ಜ್ಞಾನಗಂಗೋತ್ರಿ ಆವರಣದಲ್ಲಿನ ಸಮಾಜ ವಿಜ್ಞಾನ ಮತ್ತು ವಿಜ್ಞಾನ ಸ್ನಾತಕೋತ್ತರ ಕಟ್ಟಡದ ಮೇಲ್ಛಾವಣಿ ಮೇಲೆ ನೂತನವಾಗಿ ರಚಿಸುವ Auditorium, Library, Examination Hall, ಮತ್ತು ಇತರ ಕಟ್ಟಡ ನಿರ್ಮಾಣ ಮಾಡಬಹುದಾಗಿದೆ. ಒಪ್ಪಂದ ಅವಧಿ ನಂತರ ಈ ಕಟ್ಟಡಗಳನ್ನು ಸಹಜ ಸ್ಥಿತಿಯಲ್ಲಿ ಅಂಗರಚನಾ ಶಾಸ್ತ್ರದ (ಅನಾಟಮಿ) ಡಿಸೆಕ್ಷನ ಹಾಲ್, ಪೆಥಾಲಜಿ, ಮೈಕ್ರೋಬಯಾಲಜಿ, ವೈದ್ಯನ್ಯಾಯಶಾಸ್ತ್ರ, ಫಾರ್ಮಕಾಲಜಿ, ವಿಭಾಗಗಳ ಅವಶ್ಯಕವಾಗಿರುವ ಪ್ರಯೋಗಾಲಯಗಳನ್ನು (Practical Laboratories) ನಿರ್ಮಾಣ ಮಾಡಬಹುದಾಗಿದೆ ಹಾಗೂ ಒಪ್ಪಂದ ಅವಧಿ ನಂತರ ಈ ಕಟ್ಟಡಗಳನ್ನು ಸಹಜ ಸ್ಥಿತಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸುವುದು.
8. ಜ್ಞಾನಗಂಗೋತ್ರಿ ಆವರಣದ ಸಂಪೂರ್ಣ ಕಟ್ಟಡ ನಿರ್ವಹಣೆ ಮಾಡುವುದು, ಬಣ್ಣದ ಲೇಪನ ಮಾಡಿಸುವುದು, ಸ್ವಚ್ಛತೆ, ಉದ್ಯಾನವನ, ವಿದ್ಯುತ್ ಬಿಲ್ ಪಾವತಿ ಸಂಪೂರ್ಣ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ.
9. ಸಮಾಜ ವಿಜ್ಞಾನ ಮತ್ತು ವಿಜ್ಞಾನ ವಿಭಾಗದ ಕಟ್ಟಡದ ಮೇಲೆ ಹೊಸದಾಗಿ ತರಗತಿ ಕೊಠಡಿಗಳನ್ನು ನಿರ್ಮಿಸಿಕೊಳ್ಳುವಾಗ ಕಟ್ಟಡದ ಸಾಮರ್ಥ್ಯ, ಕ'ಟ್ಟಡ ವಿನ್ಯಾಸ, ಮರುಬಳಕೆ ಇವೆಲ್ಲವುಗಳ ಸಾಮರ್ಥ್ಯದ ಬಗ್ಗೆ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳಿಂದ ಪ್ರಮಾಣ ಪತ್ರ ಪಡೆಯತಕ್ಕದ್ದು.
10. ಸ್ನಾತಕೋತ್ತರ ಅಧ್ಯಯನ ಕೇಂದ್ರವಾದ ಜ್ಞಾನಗಂಗೋತ್ರಿ ಆವರಣದಲ್ಲಿ ಯಾವುದೇ ತರಹದ ಅವಘಡಗಳಿಗೆ ಆಸ್ಪದ ನೀಡದೆ ಜವಾಬ್ದಾರಿಯಿಂದ ವರ್ತಿಸತಕ್ಕದ್ದು. ತಪ್ಪಿದಲ್ಲಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರೇ ಹೊಣೆಗಾರರಾಗಿರುತ್ತಾರೆ.
11. ಜ್ಞಾನಗಂಗೋತ್ರಿ ಆವರಣದಲ್ಲಿರುವ Diesel Generator ನ್ನು ಅನುಸ್ಥಾಪನೆ ಮಾಡಿಕೊಂಡು ಉಪಯೋಗಿಸುವುದು ಮತ್ತು ಅದರ ಸಂಪೂರ್ಣ ನಿರ್ವಹಣೆಯು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ.

**ಮುಂದುವರೆದಿದೆ..**

ಕುಲಸಚಿವರು | ಕುಲಪತಿಗಳು

12. ಕಟ್ಟಡ ನಿರ್ವಹಣೆಯೊಂದಿಗೆ ಸೋಲಾರ್‌ನಿಂದ ಬರುವ ವಿದ್ಯುತ್ತನ್ನು ಕಛೇರಿ ಬಳಕೆಗೆ ಉಪಯೋಗಿಸಲು ಅನುವು ಮಾಡಿಕೊಡತಕ್ಕದ್ದು.
13. ಜ್ಞಾನಗಂಗೋತ್ರಿಯಲ್ಲಿರುವ ಜಿಮ್ ಕೊಠಡಿಯನ್ನು ಶಬ್ಧನಿರೋಧಕ ಕೊಠಡಿಯಾಗಿ ನಿರ್ಮಿಸಿ, ಜಿಮ್‌ನಲ್ಲಿರುವ ವ್ಯಾಯಾಮ ಉಪಕರಣಗಳನ್ನು ವರ್ಗಾವಣೆ ಮಾಡಿಕೊಡತಕ್ಕದ್ದು.
14. ಜ್ಞಾನಗಂಗೋತ್ರಿ ಆವರಣದಲ್ಲಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ'ಯು ಕನಿಷ್ಠ 10 ಎಕರೆ ಸೌರಶಕ್ತಿ ಸ್ಥಾವರ (Solar Plant) ವನ್ನು ನಿರ್ಮಾಣ ಮಾಡತಕ್ಕದ್ದು.
15. ಜ್ಞಾನಗಂಗೋತ್ರಿ ಆವರಣದಲ್ಲಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಮಳೆನೀರು ಕೊಯ್ಲು (Rain Water harvesting plant / unit) ನಿರ್ಮಿಸಬೇಕು.
16. ಜ್ಞಾನಗಂಗೋತ್ರಿ ಆವರಣದ ಮುಖ್ಯ ದ್ವಾರದ ಬಳಿ (Entrance Gate with Arch) ನಿರ್ಮಿಸಿಕೊಳ್ಳತಕ್ಕದ್ದು.
17. ಜ್ಞಾನಗಂಗೋತ್ರಿ ಆವರಣದಲ್ಲಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ'ಯು 30 ಸಂಖ್ಯೆಗಳ ಕಂಪ್ಯೂಟರ್‌ಗಳನ್ನೊಳಗೊಂಡ Computer Lab ನಿರ್ಮಾಣ ಮಾಡಿಕೊಡುವುದು.
18. ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ತಾತ್ಕಾಲಿಕವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ವಶಕ್ಕೆ ನೀಡಲಾದ ಕಟ್ಟಡಗಳನ್ನು ಹಿಂಪಡೆಯಲಾಗುವುದು.

ಈಗಾಗಲೇ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ನೀಡಲಾದ ಕೊಠಡಿಗಳೊಂದಿಗೆ ಈ ಕೆಳಕಂಡ ಕೊಠಡಿಗಳನ್ನು ಉಪಯೋಗಿಸಿಕೊಳ್ಳಲು ಅನುಮತಿಗಾಗಿ ಕೋರಿರುತ್ತಾರೆ.

**ಅನುಬಂಧ-1**

| ಕ್ರಮ. ಸಂಖ್ಯೆ | ಕಟ್ಟಡ | ಕೊಠಡಿಗಳ ವಿವರ |
|---|---|---|
| 01 | ಸಮಾಜ ವಿಜ್ಞಾನ ಭವನ ಕಟ್ಟಡ | 1. ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಆಂತರಿಕ ಗ್ರಂಥಾಲಯ ಕೊಠಡಿ.<br>2. ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ರೀಡಿಂಗ್ ಕೊಠಡಿ.<br>3. ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಬೋಧಕರ ಕೊಠಡಿಯ ಪಕ್ಕದಲ್ಲಿ ಖಾಲಿ ಉಳಿದಿರುವ ಜಾಗದಲ್ಲಿ ಪಾರ್ಟಿಷನ್ ಕೊಠಡಿ.<br>4. ಕನ್ನಡ ಅಧ್ಯಯನ ವಿಭಾಗದ ಪಕ್ಕದಲ್ಲಿರುವ ಮೆಟ್ಟಿಲುಗಳ ಕೆಳಗೆ ಇರುವ ಕೊಠಡಿ. |
| 02 | ವಿಜ್ಞಾನ ಭವನ ಕಟ್ಟಡ | 1. ಅರ್ಥಶಾಸ್ತ್ರ ಅಧ್ಯಯನ ವಿಭಾಗದ ತರಗತಿ ಕೊಠಡಿಗಳು-03, Staff Room-01, Office Room-01.<br>2. ಜಿಮ್ ಕೊಠಡಿ (ಜಿಮ್ ಉಪಕರಣಗಳನ್ನು ಬೇರೆ ಕೊಠಡಿಗೆ ಸ್ಥಳಾಂತರಿಸಿದ ನಂತರ)<br>3. ಸಭಾಂಗಣ<br>4. ಕಂಪ್ಯೂಟರ್ ಲ್ಯಾಬ್ (ವಿದ್ಯಾರ್ಥಿಗಳಿಗೆ ತರಗತಿಗಳನ್ನು ತೆಗೆದುಕೊಳ್ಳಲು ಮಾತ್ರ)<br>5. ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಯೋಗಿಕ ಕೊಠಡಿಯ ಹಿಂಬದಿಯ ತರಗತಿ ಕೊಠಡಿ.<br>6. ಎನ್.ಎಸ್.ಎಸ್ ಕೊಠಡಿ (ಬದಲಿ ವ್ಯವಸ್ಥೆಯನ್ನು ಮಾಡಿದ ನಂತರ ನೀಡಲಾಗುವುದು) |

ಸದರಿ ಮಾಹಿತಿಯನ್ನು ದಿನಾಂಕಃ29.01.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ಮುಂದುವರೆದಿದೆ..**

ಕುಲಸಚಿವರು

ಕುಲಪತಿಗಳು

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ ಆವರಣದಲ್ಲಿನ ಈ ಮೇಲ್ಕಂಡ ಅನುಬಂಧ–1 ರಲ್ಲಿ ತಿಳಿಸಿರುವ ಕೊಠಡಿಗಳನ್ನು ಚಿತ್ರದುರ್ಗ ಜಿಲ್ಲೆಯ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (CMCRI) ಇವರಿಗೆ ಎರಡು(02) ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಈ ಮೇಲ್ಕಂಡ 18 ಅಂಶಗಳು ಹಾಗೂ ಇನ್ನಿತರೆ ಯಾವುದಾದರು ಷರತ್ತುಗಳಿದ್ದಲ್ಲಿ ವಿದಿಸಿ ಪರಿಷ್ಕೃತ ಕರಾರು ಒಪ್ಪಂದ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು | ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 26 | |
|---|---|
| ವಿಷಯ ಸಂಖ್ಯೆ: | ಸಿಂ.07(a)/(01/26) |

## –: ಟಿಪ್ಪಣಿ :–

**ವಿಷಯಃ 2026–27ನೇ ಶೈಕ್ಷಣಿಕ ಸಾಲಿಗೆ ಕಿರ್ಲೋಸ್ಕರ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಹರಿಹರ – ಕಾಲೇಜು ಸ್ವಯಂ ಮುಚ್ಚುವಿಕೆ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:23.10.2025
2. ಪ್ರಾಂಶುಪಾಲರು, ಕಿರ್ಲೋಸ್ಕರ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಹರಿಹರ, ಇವರ ಮನವಿ ಪತ್ರ ಸಂ:2024–25/ KIAMS-UG/DVE-10 ದಿನಾಂಕ:20.11.2025
3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:27.01.2026

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಾದ ಕಿರ್ಲೋಸ್ಕರ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಹರಿಹರ, ಇವರು ಉಲ್ಲೇಖ(01)ರ ಸರ್ಕಾರದ ಪತ್ರದನ್ವಯ 2026–27ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗೆ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಉಲ್ಲೇಖ(02)ರ ಪತ್ರದ ಮೂಲಕ ಸ್ವಯಂ ಕಾಲೇಜು ಮುಚ್ಚುವಿಕೆಗೆ ಅನುಮತಿ ಕೋರಿ ಮನವಿ ಸಲ್ಲಿಸಿರುತ್ತಾರೆ. ಈ ಸಂಬಂಧ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (65) ರನ್ವಯ, ಸದರಿಯವರ ಕಾಲೇಜು ಮುಚ್ಚುವಿಕೆಯ ಮನವಿಯನ್ನು ದಿನಾಂಕ:29.01.2026ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಾದ – ಕಿರ್ಲೋಸ್ಕರ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಹರಿಹರ – ಈ ಕಾಲೇಜು 2026–27ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗೆ ಅರ್ಜಿ ಸಲ್ಲಿಸದೇ ಇರುವುದರಿಂದ ಹಾಗೂ ಸ್ವಯಂ ಕಾಲೇಜು ಮುಚ್ಚುವಿಕೆಗೆ ಅನುಮತಿ ಕೋರಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000 ರ ಸೆಕ್ಷನ್ (65) ರನ್ವಯ ಹಾಗೂ ವಿಶ್ವವಿದ್ಯಾನಿಲಯವು ವಿದಿಸುವ ಷರತ್ತಿಗೊಳಪಟ್ಟು ಸದರಿ ಕಾಲೇಜಿನ ಮುಚ್ಚುವಿಕೆಯ ಮನವಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು.

ಕುಲಸಚಿವರು	ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 27 | |
|---|---|
| ವಿಷಯ ಸಂಖ್ಯೆ: | ಸಿಂ.07(b)/(01/26) |

## –ಃ ಟಿಪ್ಪಣಿ ಃ–

**ವಿಷಯಃ** **2025–26ನೇ ಶೈಕ್ಷಣಿಕ ಸಾಲಿಗೆ ಜಿ.ಎಂ.ಎಸ್. ಅಕಾಡೆಮಿ, ದಾವಣಗೆರೆ ಕಾಲೇಜು ಸ್ವಯಂ ಮುಚ್ಚುವಿಕೆ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:04.10.2024
2. ಪ್ರಾಂಶುಪಾಲರು, ಜಿ.ಎಂ.ಎಸ್. ಅಕಾಡೆಮಿ, ದಾವಣಗೆರೆ ಇವರ ಪತ್ರ ಸಂ: ಜಿಎಂಎಸ್ ಅಪ್ರದಕಾ/ದಾವಿ/ಪ್ರವೇಶ/2024–25/563/2 ದಿನಾಂಕ:19.11.2024
3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:27.01.2026

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಾದ – ಜಿ.ಎಂ.ಎಸ್. ಅಕಾಡೆಮಿ, ದಾವಣಗೆರೆ, ಇವರು ಉಲ್ಲೇಖ (01) ರ ಸರ್ಕಾರದ ಪತ್ರದನ್ವಯ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಉಲ್ಲೇಖ (02) ಪತ್ರದ ಮೂಲಕ ಸ್ವಯಂ ಕಾಲೇಜು ಮುಚ್ಚುವಿಕೆಗೆ ಅನುಮತಿ ಕೋರಿ ಮನವಿ ಸಲ್ಲಿಸಿರುತ್ತಾರೆ. ಈ ಸಂಬಂಧ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (65) ರನ್ವಯ, ಸದರಿಯವರ ಕಾಲೇಜು ಮುಚ್ಚುವಿಕೆಯ ಮನವಿಯನ್ನು ದಿನಾಂಕ:29.01.2026ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಾದ – ಜಿ.ಎಂ.ಎಸ್. ಅಕಾಡೆಮಿ, ದಾವಣಗೆರೆ – ಈ ಕಾಲೇಜು 2025–26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗೆ ಅರ್ಜಿ ಸಲ್ಲಿಸದೇ ಇರುವುದರಿಂದ ಹಾಗೂ ಸ್ವಯಂ ಕಾಲೇಜು ಮುಚ್ಚುವಿಕೆಗೆ ಅನುಮತಿ ಕೋರಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000 ರ ಸೆಕ್ಷನ್ (65) ರನ್ವಯ ಹಾಗೂ ವಿಶ್ವವಿದ್ಯಾನಿಲಯವು ವಿಧಿಸುವ ಷರತ್ತಿಗೊಳಪಟ್ಟು ಸದರಿ ಕಾಲೇಜಿನ ಮುಚ್ಚುವಿಕೆಯ ಮನವಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು.

ಕುಲಸಚಿವರು　　　　　　　　　　ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 28 | |
|---|---|
| ವಿಷಯ ಸಂಖ್ಯೆ: | ಸಿಂ.07(c)/(01/26) |

## –: ಟಿಪ್ಪಣಿ :–

ವಿಷಯ: **2024–25ನೇ ಶೈಕ್ಷಣಿಕ ಸಾಲಿಗೆ ಶ್ರೀ ಮಹಾಯೋಗಿ ವೇಮನ ಪದವಿ ಕಾಲೇಜು, ಹೊಸಹಳ್ಳಿ, ಹರಿಹರ (ತಾ), ದಾವಣಗೆರೆ (ಜಿ) – ಕಾಲೇಜು ಸ್ವಯಂ ಮುಚ್ಚುವಿಕೆ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ: ಇಡಿ 166 ಯುಎನ್ಇ 2023, ದಿನಾಂಕ:08.05.2024.
2. ಪ್ರಾಂಶುಪಾಲರು, ಶ್ರೀ ಮಹಾಯೋಗಿ ವೇಮನ ಪದವಿ ಕಾಲೇಜು, ಹೊಸಹಳ್ಳಿ ಇವರ ಪತ್ರ ದಿನಾಂಕ:28.01.2026
3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:27.01.2026

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಾದ – ಶ್ರೀ ಮಹಾಯೋಗಿ ವೇಮನ ಪದವಿ ಕಾಲೇಜು, ಹೊಸಹಳ್ಳಿ, ಹರಿಹರ (ತಾ), ದಾವಣಗೆರೆ(ಜಿ) ಇವರು ಉಲ್ಲೇಖ (01) ರ ಸರ್ಕಾರದ ಪತ್ರದನ್ವಯ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಉಲ್ಲೇಖ (02) ಪತ್ರದ ಮೂಲಕ ಸ್ವಯಂ ಕಾಲೇಜು ಮುಚ್ಚುವಿಕೆಗೆ ಅನುಮತಿ ಕೋರಿ ಮನವಿ ಸಲ್ಲಿಸಿರುತ್ತಾರೆ. ಈ ಸಂಬಂಧ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (65) ರನ್ವಯ, ಸದರಿಯವರ ಕಾಲೇಜು ಮುಚ್ಚುವಿಕೆಯ ಮನವಿಯನ್ನು ದಿನಾಂಕ:29.01.2026ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಾದ – ಶ್ರೀ ಮಹಾಯೋಗಿ ವೇಮನ ಪದವಿ ಕಾಲೇಜು, ಹೊಸಹಳ್ಳಿ, ಹರಿಹರ (ತಾ), ದಾವಣಗೆರೆ(ಜಿ) – ಈ ಕಾಲೇಜು 2024–25ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗೆ ಅರ್ಜಿ ಸಲ್ಲಿಸದೇ ಇರುವುದರಿಂದ ಹಾಗೂ ಸ್ವಯಂ ಕಾಲೇಜು ಮುಚ್ಚುವಿಕೆಗೆ ಅನುಮತಿ ಕೋರಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000 ರ ಸೆಕ್ಷನ್ (65) ರನ್ವಯ ಹಾಗೂ ವಿಶ್ವವಿದ್ಯಾನಿಲಯವು ವಿಧಿಸುವ ಷರತ್ತಿಗೊಳಪಟ್ಟು ಸದರಿ ಕಾಲೇಜಿನ ಮುಚ್ಚುವಿಕೆಯ ಮನವಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 29 | |
|---|---|
| ವಿಷಯ ಸಂಖ್ಯೆ: | ಸಿಂ.07(d)/(01/26) |

## –: ಟಿಪ್ಪಣಿ :–

ವಿಷಯಃ **2024–25ನೇ ಶೈಕ್ಷಣಿಕ ಸಾಲಿಗೆ ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು – ಕಾಲೇಜು ಸ್ವಯಂ ಮುಚ್ಚುವಿಕೆ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ; ಇಡಿ 166 ಯುಎನ್‌ಇ 2023, ದಿನಾಂಕ:08.05.2024.
2. ಪ್ರಾಂಶುಪಾಲರು, ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು ಇವರ ಪತ್ರ ದಿನಾಂಕ:28.01.2026
3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:27.01.2026

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಾದ – ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು ಇವರು ಉಲ್ಲೇಖ (01) ರ ಸರ್ಕಾರದ ಪತ್ರದನ್ವಯ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಅರ್ಜಿ ಸಲ್ಲಿಸಿರುವುದಿಲ್ಲ ಹಾಗೂ ಉಲ್ಲೇಖ (02) ಪತ್ರದ ಮೂಲಕ ಸ್ವಯಂ ಕಾಲೇಜು ಮುಚ್ಚುವಿಕೆಗೆ ಅನುಮತಿ ಕೋರಿ ಮನವಿ ಸಲ್ಲಿಸಿರುತ್ತಾರೆ. ಈ ಸಂಬಂಧ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (65) ರನ್ವಯ, ಸದರಿಯವರ ಕಾಲೇಜು ಮುಚ್ಚುವಿಕೆಯ ಮನವಿಯನ್ನು ದಿನಾಂಕ:29.01.2026ರ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಾದ – ಬಸವ ಭಾರತಿ ಪ್ರಥಮ ದರ್ಜೆ ಕಾಲೇಜು, ಜಗಳೂರು – ಈ ಕಾಲೇಜು 2024–25ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗೆ ಅರ್ಜಿ ಸಲ್ಲಿಸದೇ ಇರುವುದರಿಂದ ಹಾಗೂ ಸ್ವಯಂ ಕಾಲೇಜು ಮುಚ್ಚುವಿಕೆಗೆ ಅನುಮತಿ ಕೋರಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000 ರ ಸೆಕ್ಷನ್ (65) ರನ್ವಯ ಹಾಗೂ ವಿಶ್ವವಿದ್ಯಾನಿಲಯವು ವಿಧಿಸುವ ಷರತ್ತಿಗೊಳಪಟ್ಟು ಸದರಿ ಕಾಲೇಜಿನ ಮುಚ್ಚುವಿಕೆಯ ಮನವಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿ ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಲಾಯಿತು.

ಕುಲಸಚಿವರು                ಕುಲಪತಿಗಳು

## "ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು"

| | |
|---|---|
| **1** | **ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರಿಗೆ ನೌಕರರಿಗೆ 7ನೇ ರಾಜ್ಯ ವೇತನ ಶ್ರೇಣಿಯನ್ನು ಜಾರಿಗೊಳಿಸುವ ಕುರಿತು.** |
| ನಿರ್ಣಯ | ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರಿಗೆ 7ನೇ ರಾಜ್ಯ ವೇತನ ಶ್ರೇಣಿಯನ್ನು ಜಾರಿಗೊಳಿಸಲು ನಿಯಮಾನುಸಾರ ಷರತ್ತುಗಳನ್ನು ವಿಧಿಸಿ ಆಡಿಟ್ ಆಕ್ಷೇಪಣೆಗಳಿಗೊಳಪಟ್ಟು ನೌಕರರಿಂದ ಮುಚ್ಚಳಿಕೆ ಪತ್ರ ಪಡೆದು ಸದರಿ ಸಿಂಡಿಕೇಟ್ ದಿನಾಂಕದಿಂದ 7ನೇ ರಾಜ್ಯ ವೇತನ ಶ್ರೇಣಿಯನ್ನು ಜಾರಿಗೊಳಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು. |
| **2** | **ಅತಿಥಿ ಉಪನ್ಯಾಸಕರುಗಳಿಗೆ ಫೆಬ್ರವರಿ–2025 ರಿಂದ ಪೂರ್ವಾನ್ವಯವಾಗುಂತೆ 10 ತಿಂಗಳ ಆದೇಶ ನೀಡುವ ಕುರಿತು.** |
| ನಿರ್ಣಯ | ದಿನಾಂಕ:30.12.2025ರ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದ್ದು ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ನಿಗದಿಪಡಿಸಲು ಕ್ರಮಕ್ಕೈಗೊಳ್ಳಲಾಗುವುದೆಂದು ಹಾಗೂ ಕ್ರಮ ಕೈಗೊಂಡಿರುವ ಮಾಹಿತಿಯನ್ನು ಮುಂದಿನ ಸಿಂಡಿಕೇಟ್ ಸಭೆಯ ಅವಗಾಹನೆಗೆ ತಂದು ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು. |

ಕೊನೆಯಲ್ಲಿ ಕುಲಸಚಿವರು (ಆಡಳಿತ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು